ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೩, ಸಂಚಿಕೆ ೬, ನವೆಂಬರ್ ೨೦೧೫

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಸಿಡ್ನಿ ದಸರಾ ಹಬ್ಬ ... ಪು. ೨
ಮತ್ತಷ್ಟು ವರದಿಗಳು ... ಪು. ೪

ಚಿಲುಮೆಯ ಒಳಗೆ

ವಿಚಾರ-ವಿಹಾರ ... ಪು. ೬
ರಾಂ ರಾಮ! ಹಾಸ್ಯ ... ಪು. ೭
ಮೀಸೆ ಮುನಿಯಪ್ಪ (ಕಥೆ) ... ಪು. ೧೦

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೧೫
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೬

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೭
ಕನ್ನಡಮ್ಮನ ಬೇಟ (ಹಾಸ್ಯ) ... ಪು. ೧೮

ಚಿಲುಮೆಯ ಒಳಗೆ

ಹೊರದೇಶದಲ್ಲಿ ಕನ್ನಡ ... ಪು. ೨೧
ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೩

ಕನ್ನಡದ ಒಂದು ಕಾಯಕಕ್ಕೆ ಮನವಿ
ಪುಟ ೨೦

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಒಂದು ಭಾಷೆಯ ಹಿರಿಮೆಯು ಆ ಭಾಷೆಯಲ್ಲಿ ರಚಿತವಾದ ಉತ್ತಮ ಕೃತಿಗಳಿಂದ ನಿರ್ಧರಿಸಲ್ಪಡುತ್ತದೆಯೇನೋ ಸರಿ. ಅಷ್ಟೇ ಮುಖ್ಯವಾದ ಇನ್ನೊಂದು ಅಂಶವೆಂದರೆ, ಆ ಭಾಷೆಯನ್ನು ಎಷ್ಟು ವಿಸ್ತಾರವಾಗಿ ಜನರು ಬಳಸುತ್ತಿದ್ದಾರೆ ಎಂಬುದು. ಜಗತ್ತಿನ ಅದೆಷ್ಟೋ ಭಾಷೆಗಳು ಹಿಂದೆ ಪ್ರಚಲಿತದಲ್ಲಿದ್ದು ಈಗ ಗತಿಸಿಹೋದ ಪಟ್ಟಿಯನ್ನು ಸೇರಿಕೊಂಡಿವೆ. ಭಾರತ ಮೂಲದ ಭಾಷೆಗಳಾದ ಅರ್ಧಮಾಗಧಿಯಾಗಲಿ, ಪಾಲಿಯಾಗಲಿ, ಅಷ್ಟೇಕೆ! ಎಲ್ಲರ ಬಾಯಲ್ಲಿ ಶ್ಲೋಕಗಳ ರೂಪದಲ್ಲಿ ನಲಿದಾಡುವ ಸಂಸ್ಕೃತದ್ದೂ ಅದೇ ಗತಿ. ಎಷ್ಟೇ ಅಭಿಮಾನದಿಂದ ಸಂಸ್ಕೃತವನ್ನು ದೇವಭಾಷೆಯೆಂದು ಹೇಳಿಕೊಂಡರೂ, ಆ ಭಾಷೆಯಲ್ಲಿ ಮಾತನಾಡುವವರು ಅತಿ ವಿರಳವಿರುವ ಕಾರಣದಿಂದ ಭಾಷಾಶಾಸ್ತ್ರಜ್ಞರ ಪ್ರಕಾರ ಅದನ್ನು ನಶಿಸಿ ಹೋದ ಭಾಷೆಗಳ ಗುಂಪಿಗೆ ಸೇರಿಸಿದರೆ, ಒಪ್ಪಲೇಬೇಕಾದ ಸ್ಥಿತಿಯುಂಟು. ಕೆಲವರ ಹೇಳಿಕೆಗಳ ಪ್ರಕಾರ, ಜಗತ್ತಿನಲ್ಲಿರುವ ಸುಮಾರು ೭೦೦೦ ಭಾಷಾ ಪ್ರಭೇದಗಳ ಪಟ್ಟಿಯಿಂದ ಕ್ರಿ. ಶ. ೨೦೫೦ ರ ಇಸವಿಯ ಹೊತ್ತಿಗೆ ೮೦-೯೦ ಪ್ರತಿಶತ ಭಾಷೆಗಳು ನಶಿಸಿ ಹೋಗುತ್ತವೆ.

ನಮ್ಮೆಲ್ಲರ ಮೆಚ್ಚಿನ ಕನ್ನಡವು ಚಿನ್ನದ ಗಣಿಯೇ ಸರಿ. ಅದೆಷ್ಟು ಹೆಮ್ಮೆಯ ಸಾಹಿತ್ಯ ಸಿರಿಯಿದೆ ನಮ್ಮಲ್ಲಿ. ಓದಲು ತೊಡಗಿದರೆ ಈ ಜೀವಮಾನವೇ ಸಾಲುವುದಿಲ್ಲ. ಆದರೆ ಆ ಹೆಮ್ಮೆಗಿಂತಲೂ ಈಗ ಮುಖ್ಯವಾಗಿರುವುದು ನಮ್ಮ ದಿನಬಳಕೆಯಲ್ಲಿ ನಾವು ಎಷ್ಟು ಕನ್ನಡವನ್ನು ಬಳಸುತ್ತೇವೆ ಎಂಬುದು. ಹೇಗೆ ನೀವು ಚಿನ್ನದ ತಟ್ಟೆಯಲ್ಲೇ ಊಟ ಮಾಡಬಹುದಾದರೂ, ತಿನ್ನಲು ಅನ್ನ ಬೇಕೋ, ಹಾಗೆಯೇ ನಾವು ಇಂತಹ ಭಾಷೆಯ ಮೂಲದವರು ಎಂಬ ಅಸ್ಮಿತೆಯನ್ನು ಎಲ್ಲರಿಗೂ ಗುರುತುಮಾಡಿಕೊಡಲು ಅದನ್ನು ನಾವು ಹೆಚ್ಚಾಗಿ ಮಾತಾಡಿ, ಬರೆದು ತೋರಿಸಬೇಕು. ನಂಬಿ, ಒಮ್ಮೆ ನೀವು ಕನ್ನಡದಲ್ಲಿ ಬರೆದು, ಮಾತನಾಡುವ ಅಭ್ಯಾಸ ಶುರುಮಾಡಿಕೊಂಡರೆ ಅದನ್ನು ಬಿಡಲು ನಿಮಗೆ ಮನಸ್ಸಾಗುವುದಿಲ್ಲ. ಇದು ನಿಮ್ಮ ನುಡಿ, ನಿಮ್ಮ ನಡೆಯಲ್ಲೂ ಅದನ್ನು ಬರಮಾಡಿಕೊಳ್ಳಿ ಎಂಬುದೇ ಹೊರನಾಡ ಚಿಲುಮೆಯ ಮೂಲಕ ನಿಮ್ಮೆಲ್ಲರಲ್ಲೂ ವಿನಂತಿ.

ಕನ್ನಡವನ್ನು ಹೆಚ್ಚು ಹೆಚ್ಚು ಬಳಸಲು ಒಂದಷ್ಟು ಉಪಯುಕ್ತ ಸಲಹೆಗಳು.

ಬಹುತೇಕ ಎಲ್ಲ ಇಮೇಲ್ ನಲ್ಲಿ ಈಗ ಕನ್ನಡ ಬರೆಯಲು ಸಾಧ್ಯ. ಕನ್ನಡವನ್ನು ಬಲ್ಲ ನಿಮ್ಮ ಬಳಗದವರೊಂದಿಗೆ ಆದಷ್ಟೂ ಕನ್ನಡದಲ್ಲಿ ಬರೆಯಿರಿ. ನಿಮ್ಮ ಭಾಷೆಯಲ್ಲಿ ಬರೆದು ಓದುವುದಕ್ಕೆ ನಿಮಗೇ ಸಂತಸವಾಗುತ್ತದೆ. ಈಗೀಗ ಬರುತ್ತಿರುವ ಮೊಬೈಲ್ ಫೋನಿನಲ್ಲಿ ಕನ್ನಡ ಬರೆಯಲು ಸಾಧ್ಯ. ನೀವು ಕಳಿಸುವ ಎಸ್.ಎಂ.ಎಸ್. ಇತ್ಯಾದಿಗಳು ಕನ್ನಡದಲ್ಲಿರಲಿ. ಅಂತರ್ಜಾಲದಲ್ಲಿ ಅನೇಕ ಕನ್ನಡ ಪತ್ರಿಕೆಗಳು ಸಿಗುತ್ತವೆ. ದಿನನಿತ್ಯದ ವಾರ್ತೆಗಾಗಿ ಅವುಗಳನ್ನು ಓದಿ. ನಿಮ್ಮ ಮಕ್ಕಳಿಗೆ ನೀವೇ ಕನ್ನಡವನ್ನು ಕಲಿಸಿ. ಅವರೊಂದಿಗೆ ಕನ್ನಡದ ಸಾಹಿತ್ಯ, ಆಗುಹೋಗುಗಳ ಬಗ್ಗೆ ಪರಿಚಯ ಮಾಡಿಕೊಡಿ. ಕನ್ನಡ ಹಾಡುಗಳನ್ನು ಆಲಿಸಿ. ಮಕ್ಕಳಿಗೆ ಕನ್ನಡದ ಕಥೆ ಪುಸ್ತಕ ಓದಿಸಿ. ಶುಭಾಶಯ ಪತ್ರ ಇತ್ಯಾದಿ ಸಂದೇಶಗಳನ್ನು ಕನ್ನಡದಲ್ಲಿ ಬರೆಯಿರಿ. ನಿಮ್ಮ ನಿಮ್ಮ ಗಣಕಯಂತ್ರದಲ್ಲಿ ಕನ್ನಡವನ್ನು ಹೆಚ್ಚು ಹೆಚ್ಚು ಬಳಸಿ. ಹಾಗೆಯೇ ಫೇಸ್ಬುಕ್, ಇತ್ಯಾದಿ ಜಾಲತಾಣಗಳಲ್ಲಿ ಕನ್ನಡದಲ್ಲಿ ವ್ಯವಹರಿಸಿ. ಮರೆಯಬೇಡಿ - *ಕನ್ನಡದ ಮಾತು ಚೆನ್ನ, ಕನ್ನಡದ ನೆಲ ಚೆನ್ನ, ಕನ್ನಡಿಗರ ಮನಸು ಚೆನ್ನ* ▪

ಎರಡು ತಿಂಗಳ ಪ್ರಮುಖ ದಿನಗಳು

ನವೆಂಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ
ವರ್ಷ/ಶರದ್ ಋತು, ಅಶ್ವಯುಜ/ಕಾರ್ತೀಕ ಮಾಸ

01 ಭಾ - ಕನ್ನಡ ರಾಜ್ಯೋತ್ಸವ ದಿನ
07 ಶ - ರಮಾ ಏಕಾದಶಿ
10 ಮಂ - ನರಕ ಚತುರ್ದಶಿ
11 ಬು - ದೀಪಾವಳಿ ಅಮಾವಾಸ್ಯೆ
12 ಗು - ಬಲಿಪಾಡ್ಯಮಿ/ಕಾರ್ತೀಕ ಮಾಸ ಆರಂಭ
22 ಭಾ - ಪ್ರಭೋಧಿನಿ ಏಕಾದಶಿ, 23 ಸೋ - ಉತ್ಥಾನ ದ್ವಾದಶಿ
25 ಬು - ಗುರು ನಾನಕ್ ಜನ್ಮದಿನ, ಹುಣ್ಣಿಮೆ
26 ಗು - ಹುತ್ತರಿ ಹಬ್ಬ
28 ಶ - ಕನಕದಾಸರ ಜಯಂತಿ
29 ಭಾ - ಸಂಕಷ್ಟ ಚತುರ್ಥಿ

ಡಿಸೆಂಬರ್ ಶ್ರೀ ಮನ್ಮಥ ನಾಮ ಸಂವತ್ಸರ, ದಕ್ಷಿಣಾಯಣ,
ಶರದ್/ಹೇಮಂತ ಋತು, ಕಾರ್ತೀಕ/ಮಾರ್ಗಶಿರ ಮಾಸ

01 ಮಂ - ವಿಶ್ವ ಏಡ್ಸ್ ದಿನ
07 ಸೋ- ಏಕಾದಶಿ, ಬೆಂಗಳೂರು ಕಡಲೇಕಯಿ ಪರಷೆ
10 /11 ಗು/ಶು - ಅಮಾವಾಸ್ಯೆ
12 ಶ - ಮಾರ್ಗಶಿರ ಮಾಸ ಆರಂಭ
23 ಬು - ಹನುಮಾನ್ ಜಯಂತಿ
24 ಗು ಈದ್ ಮಿಲಾದ್
25 ಶು - ಕ್ರಿಸ್ ಮಸ್, ದತ್ತಾತ್ರೇಯ ಜಯಂತಿ
28 ಸೋ - ಸಂಕಷ್ಟ ಚತುರ್ಥಿ

ಸಾವಿರಾರು ಮೈಲಿ ದಾಟಿ ಬಂದ ಕನ್ನಡಿಗರಿಗಾಗಿ, ಸಿಡ್ನಿಯ ಸುಗಮ ಕನ್ನಡ ಕೂಟ ಮತ್ತು ಕನ್ನಡ ಶಾಲೆಯ ಪರವಾಗಿ ದಸರಾ ಹಬ್ಬದ ಆಚರಣೆಯು ನವೆಂಬರ್ ಮೊದಲನೇ ವಾರಾಂತ್ಯದಲ್ಲಿ ಟೂನ್ಗಾಬಿ ಈಸ್ಟ್ ಶಾಲೆಯಲ್ಲಿ ಹಮ್ಮಿಕೊಂಡಿತ್ತು. ಇನ್ನೊಂದು ವಿಶೇಷ ಸಂಗತಿ ಎಂದರೆ ಸುಗಮ ಕನ್ನಡ ಕೂಟದ ಹತ್ತನೇ ವಾರ್ಷಿಕೋತ್ಸವ ಕೂಡ ಹೌದು. ಈ ಸಂದರ್ಭದಲ್ಲಿ ಕರ್ನಾಟಕದಿಂದ ಬಂದ ಅಥಿತಿಗಳು - ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು-ಎಲ್.ಹನುಮಂತಯ್ಯ ಮತ್ತು ಕಾರ್ಯದರ್ಶಿ- ಮುರಳೀಧರ್ ಕಡೆಮನೆ ಯವರಿಂದ ಕಾರ್ಯಕ್ರಮ ಇನ್ನಷ್ಟು ಕಳೆಗಟ್ಟಿತ್ತು.

ರಂಗು ರಂಗಾದ ಬಣ್ಣ ಬಣ್ಣದ ರಂಗೋಲಿಗಳು ನಮ್ಮನ್ನು ಬರಮಾಡಿಕೊಂಡವು. ವಿಶೇಷವಾಗಿ ನನ್ನ ಗಮನ ಸೆಳೆದಿದ್ದು ಕರ್ನಾಟಕದ ನಕ್ಷೆ, ಕೆಂಪು ಮತ್ತು ಹಳದಿ ಬಣ್ಣಗಳಿಂದ ಕಂಗೊಳಿಸುತ್ತಿತ್ತು. ಮಕ್ಕಳು ಮತ್ತು ದೊಡ್ಡವರು ಬಿಡಿಸಿದ್ದ ರಂಗೋಲಿಗಳು ಹಬ್ಬದ ವಾತಾವರಣವನ್ನು ಉಂಟು ಮಾಡಿತ್ತು.

ಮೊದಲಿಗೆ ಶ್ರೀಮತಿ ಶುಭ ರವಿಯವರು "ಹಚ್ಚೇವು ಕನ್ನಡ ದೀಪ" ಹಾಡನ್ನು ಸುಶ್ರಾವ್ಯವಾಗಿ ಹಾಡಿ, ಹೊರನಾಡ ಕನ್ನಡದ ಕಂದಮ್ಮಗಳ ಪ್ರೇಮಕ್ಕೆ ಮತ್ತು ಅಭಿಮಾನಕ್ಕೆ ನೀರೆರದ ಅನುಭವ ನೀಡಿದರು. ಶ್ರೀಯುತ ಹನುಮಂತಯ್ಯನವರು ದೀಪ ಬೆಳಗಿ ಸಭೆಯನ್ನು ಉದ್ದೇಶಿಸಿ ಒಂದೆರಡು ಮಾತನಾಡಿದರು. ಶ್ರೀಮತಿ ಪೂರ್ಣಿಮಾ ಭಟ್ ಕಾರ್ಯಕ್ರಮದ ನಿರ್ವಹಣೆ ವಹಿಸಿದರು. ಅವರ ಸ್ಪಷ್ಟ ಅಚ್ಚ ಕನ್ನಡದ ಮಾತುಗಳು ಸಭಿಕರನ್ನು ಸಂತೋಷ ಪಡಿಸಿತು.

ಕುಮಾರಿ ಸಿಂಧು, ಕುಮಾರಿ ಅಂಕಿತ ಮತ್ತು ನಿರೀಕ್ಷ ಭಟ್ ಶಾಸ್ತ್ರೀಯ ಸಂಗೀತ ಹಾಡಿದರೆ, ಕುಮಾರಿ ಆಸ್ಥಾ ಮತ್ತು ಶ್ರೀಮತಿ ಅಪರ್ಣ ನಾಗಶಯನ ಹಿಂದೂಸ್ತಾನಿ ಶೈಲಿ ಸಂಗೀತವನ್ನು ಉಣಬಡಿಸಿದರು. ಸುಗಮ ಕನ್ನಡ ಕೂಟವು ನಮ್ಮ ಸಮುದಾಯದ ಕೆಲವರನ್ನು ಆರಿಸಿ, ಅವರುಗಳು ಸಮುದಾಯಕ್ಕೆ ಮಾಡುತ್ತಿರುವ ಕೆಲಸವನ್ನು ಗುರುತಿಸಿ ಅವರಿಗೆ ಗೌರವ ಸಲ್ಲಿಸಿತು. ಅವರುಗಳು ಶ್ರೀಮತಿ ವೀಣಾ ಸುದರ್ಶನ್, ಅಪರ್ಣ ನಾಗಶಯನ ಮತ್ತು ಶ್ರೀಯುತ ಅಶೋಕ್. ವೇದಿಕೆಗೆ ಸನ್ಮಾನಿತ ಅಥಿತಿಗಳ ಜೊತೆಗೆ ಅವರ ಬೆನ್ನುಲುಬಾಗಿ, ಬೆಂಬಲ ಕೊಡುತ್ತಿರುವ ಅವರವರ ಧರ್ಮ ಪತ್ನಿ ಮತ್ತು ಪತಿಯರನ್ನು ಕೂಡ ಕರೆದು, ಹೃತ್ಪೂರ್ವಕವಾಗಿ ಅಭಿನಂದಿಸಿತು.

ಕನ್ನಡ ಶಾಲೆಯ ಮಕ್ಕಳಿಗೆ ಅವರ ಕಲಿಯುವ ಸಾಮರ್ಥ್ಯವನ್ನು ಗುರುತಿಸಿ, ಪ್ರಶಸ್ತಿಪತ್ರವನ್ನೂ ವಿತರಿಸಿದರು. ಶಾಲೆಗಾಗಿ ತಮ್ಮ ಸಮಯ ಕೊಡುತ್ತಿರುವ ಎಲ್ಲಾ ಗುರುಗಳನ್ನು ವೇದಿಕೆಗೆ ಬರಮಾಡಿ ಗೌರವವನ್ನು ಸಲ್ಲಿಸಲಾಯಿತು. ತದನಂತರ ಪುಟ್ಟ ಬಾಲಿಕೆಯರಾದ ಕುಮಾರಿ ವಿಭಾ, ಅನಿಷ, ಸೃಷ್ಟಿ ಮತ್ತು ದಿಯಾ ಸುಂದರವಾದ ಕಾಡಿನ ಹಾಡಿಗೆ (ಅಡವಿ ದೇವಿಯ ಕಾಡು ಜನಗಳ, ಈ ಹಾಡು ...) ಹೆಜ್ಜೆ ಹಾಕಿದರು. ಎಲೆ ಮತ್ತು ಹೂವುಗಳ ಅವರ ಅಲಂಕಾರ ಮನ ಸೆಳೆಯುವಂತಿತ್ತು.

ದಸರಾದ ಮತ್ತೊಂದು ವಿಶೇಷವೆಂದರೆ ಬೊಂಬೆ. ಅದಿಲ್ಲದಿದ್ದರೆ ಹಬ್ಬ ಏನೂ ಇಲ್ಲ. ಶಾಲೆಯ ಮತ್ತೊಂದು ಕೊಟಡಿಯಲ್ಲಿ ಸಾಂಪ್ರದಾಯಿಕ ಬೊಂಬೆಗಳನ್ನು ಜೋಡಿಸಿದ್ದರು. ಮೈಸೂರ್ ಜಂಬೂ ಸವಾರಿ ನೆನಪಿಸುವ ದೊಡ್ಡ ಆನೆ ಜನರನ್ನು ಬಹಳವಾಗಿ ಆಕರ್ಷಿಸಿತು. ಬೂದು ಬಣ್ಣದ ಆನೆ ನಿಜವಾದ ಮರಿ ಆನೆ ಗಾತ್ರವನ್ನೇ ಹೋಲುತಿತ್ತು. ಮಕ್ಕಳು ಮತ್ತು ದೊಡ್ಡವರೂ ಬೊಂಬೆಗಳನ್ನು ನೋಡುತ್ತಾ ತಮ್ಮ ತಮ್ಮ ಬಾಲ್ಯವನ್ನು ನೆನಪಿಸಿಕೊಂಡರು.

ದಸರಾ ಕಾರ್ಯಕ್ರಮ ಮುಗಿಯುವ ವೇಳೆಗೆ ಹೊರಗೆ ಎಲ್ಲರಿಗೂ ಭೋಜನದ ವ್ಯವಸ್ತೆಯಾಗಿತ್ತು. ಊಟದ ಸಮಯದಲ್ಲಿ ಜನಗಳು ನಗು, ಮಾತು ಕಥೆಯಲ್ಲಿ ತಲ್ಲೀನರಾದರು. ಸಿಡ್ನಿಗೆ ಹೊಸದಾಗಿ ಬಂದವರೊಬ್ಬರು, ದಸರಾ ಇಷ್ಟು ಜೋರಾಗಿ ಇಲ್ಲಿಯೂ ಮಾಡುತ್ತೀರಾ ಎಂದು ಕೇಳಿದ್ದು ನನಗೆ ಹೆಮ್ಮೆಯ ವಿಷಯವಾಗಿತ್ತು. ▪

(ಚಿತ್ರಕೃಪೆ: ಶ್ರೀ ನಾಗಭೂಷಣ್)

ಸುಗಮ ಕನ್ನಡ ಕೂಟ – ದಶಮಾನೋತ್ಸವಕಾರ್ಯಕ್ರಮದ ಛಾಯಾಚಿತ್ರಗಳು

ದಿನನಿತ್ಯದ ಬದುಕಿನಲ್ಲಿ ನಮ್ಮ ತಾಯ್ನುಡಿಯನ್ನು ಮಾತನಾಡುತ್ತಿದ್ದರೂ, ಆ ಭಾಷೆಯ ಹಿರಿಮೆಯ ದ್ಯೋತಕವಾದ ಸಾಹಿತ್ಯವನ್ನು ಸವಿಯುವುದೆಂದರೆ ಹಬ್ಬದೂಟವೇ ಸರಿ. ಅದೂ ಕನ್ನಡದ ನೆಲದಿಂದ ಬಹುದೂರವಿರುವ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಅಂತಹ ಒಂದು ಸಾಹಿತ್ಯೋತ್ಸವ ನೆರೆವೇರಿತೆಂದರೆ, ನೀವು "ಹೌದೇ" ಎನ್ನದೇ ಇರುವುದಿಲ್ಲ. ಅಂತಹ ಒಂದು ಸುಸಂದರ್ಭವು ಸಿಡ್ನಿಯ ಸುಗಮ ಕನ್ನಡ ಕೂಟದ ಹತ್ತನೇ ವರ್ಷಾಚರಣೆಯ ಕಾರ್ಯಕ್ರಮಗಳ ನಡುವೆ ಜರುಗಿತು ಎನ್ನುವುದು ಪ್ರಶಂಸನೀಯವಾದ ಸಂಗತಿಯೇ ಸರಿ.

ನವೆಂಬರ್ ೭ ಮತ್ತು ೮ ನೇ ದಿನಾಂಕವು ಸುಗಮ ಕನ್ನಡ ಕೂಟದ ದಶಮಾನೋತ್ಸವದ ಆಚರಣೆಯ ನೆಪದಲ್ಲಿ ಮೀಸಲಿಟ್ಟಿದ್ದ ಕನ್ನಡದ ಹಬ್ಬದ ದಿನಗಳು. ೭ ನೇ ತಾರೀಖಿನ ಬೆಳಗಿನ ಕಾರ್ಯಕ್ರಮಗಳು ಒಲುಮೆ, ಉತ್ಸಾಹದಿಂದ ನಡೆದು ಊಟದ ತರುವಾಯ ಶುರುವಾದ ಒಂದು ಚೆಕ್ಕ ಚೊಕ್ಕ ಕಾರ್ಯಕ್ರಮವೇ "ಸಾಹಿತ್ಯ ಸಂಗಮ" ವೆಂಬದು.

ಹಲವಾರು ಸಾಹಿತ್ಯಾಸಕ್ತರು ಸಿಡ್ನಿಯಲ್ಲಿದ್ದಾರೆ. ಆದರೆ, ಅವರೆಲ್ಲ ಒಂದು ವೇದಿಕೆಯ ಅಡಿಯಲ್ಲಿ ಬಂದದ್ದು ಇದೇ ಮೊದಲೇನೋ. ಪ್ರತಿಯೊಬ್ಬರ ಸಾಹಿತ್ಯದ ಒಲವು ಬೇರೆ ಬೇರೆಯಾಗಿದ್ದರೂ ಒಬ್ಬೊಬ್ಬರಿಂದಲೂ ಅವರ ಮೆಚ್ಚಿನ ಸಾಹಿತ್ಯದಡಿಗೆ ಕೇಳುಗರಿಗೆ ಬಡಿಸಿದಾಗ, ಚಪ್ಪಾಳೆಯ ಪ್ರಶಂಸೆ ಬಂದಿದ್ದು ಸೇರಿದ್ದ ಸಭಿಕರ ವಿಶಾಲ ಮನೋಭಾವ ತೋರಿಸುತ್ತಿತ್ತು.

ವೀಣಾ ಸುದರ್ಶನ್ ಅವರ ರಂಗಭೂಮಿಯ ಹಿನ್ನಲೆಯ ಉಚ್ಚಾರದ ನಿರೂಪಣೆಯಲ್ಲಿ ಸಾಹಿತ್ಯಾಸಕ್ತರ ಪರಿಚಯ ಮಾಡಿಕೊಡುತ್ತಾ, ವೇದಿಕೆಗೆ ಆಹ್ವಾನಿಸಲಾಯಿತು. ಹೊರದೇಶದಲ್ಲಿ ನೆಲೆಕಂಡಿದ್ದರೂ, ಎದೆಯಲ್ಲಿನ ಅಕ್ಷರ ಪ್ರೀತಿಗೆ ಅಂದು ಮಾತನಾಡಿದ ಎಲ್ಲರೂ ಉದಾಹರಣೆಯಾದರು.

ಮೊದಲಿಗೆ ಮಾತನಾಡಿದ ಡಾ॥ ಮಧುಸೂದನ್ ಅವರು ಕನ್ನಡದ ಶಾಸನಗಳಿಗೆ ನಿಖರವಾದ ರೂಪ ಕೊಟ್ಟಂತಹ ಬಿ. ಎಲ್. ರೈಸ್ ಅವರ ಬಗ್ಗೆ ತಾವು ಸಿದ್ಧಪಡಿಸಿಕೊಂಡು ಬಂದಿದ್ದ ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ಸವಿವರವಾಗಿ ಮಾತನಾಡಿದರು. ಮೂಲತಃ ಕನ್ನಡದವರಲ್ಲದವರೂ ಕೂಡ ಕನ್ನಡದ ಬಗ್ಗೆ ತೋರಿದ ಆಸಕ್ತಿಯನ್ನು ಶ್ರೀಯುತ ಮಧುಸೂದನ್ ಅವರು ರೈಸ್ ಅವರ ಬಗ್ಗೆ ವಿವರಿಸುತ್ತ ವಿವರಿಸಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಹನುಮಂತಯ್ಯನವರು ಮಾತನಾಡುತ್ತ "ಕವಿತೆಯಲ್ಲಿ ಸತ್ಯವಿರಬೇಕು" ಎಂಬ ಮಾತನ್ನು ಒತ್ತಿ ಹೇಳಿ, ತಾವೇ ಬರೆದ "ಅವ್ವ" ಎಂಬ ಪದ್ಯವೊಂದನ್ನು ಓದಿದರು. ಶ್ರೀ ಸಿಡ್ನಿ ಶ್ರೀನಿವಾಸ್ ಅವರು ಮಾತನಾಡಿ, ಅವರ ಜೀವನದಲ್ಲಿ ನಿಕಟ ಸಂಪರ್ಕಕ್ಕೆ ಬಂದಿದ್ದ ಸಾಹಿತಿಗಳ, ಅವರ ರೀತಿನೀತಿಗಳ ಸುದೀರ್ಘ ಪರಿಚಯ ಮಾಡಿಕೊಡುತ್ತ ಸಭಿಕರನ್ನು ಎಪ್ಪತ್ತರ ದಶಕಕ್ಕೆ ಕರೆದೊಯ್ದರು. ನಾಗಶಯನ ಬೆಳ್ಳಾವೆಯವರು ವೇದಿಕೆಯಲ್ಲಿ ಮಾತನಾಡುತ್ತ ಶ್ರೀಯುತ ಪಂಡಿತ್ ದತ್ತಾತ್ರೇಯ ಸದಾಶಿವ ಗರುಡ್ ಅವರ ಜೀವನ ಕುರಿತಾದ ಪುಸ್ತಕವೊಂದರ ಬಗ್ಗೆ ಬೆಳಕು ಚೆಲ್ಲಿದರು. ಆ ಪುಸ್ತಕದಲ್ಲಿ ಪಂಡಿತರು ಹೇಗೆ ತಮ್ಮ ಸಂಗೀತ ಕ್ಷೇತ್ರದಲ್ಲಿ ಕಷ್ಟ ಪಟ್ಟು ಸಾಧನೆ ಮಾಡಿದ್ದಾರೆ ಎಂಬುದರ ಉಲ್ಲೇಖವನ್ನೂ ನೀಡಿದರು. ಶ್ರೀ ಸುದರ್ಶನ್ ಅವರು ಸಭಿಕರನ್ನು ಉದ್ದೇಶಿಸಿ ಅವರಿಗೆ ಬಹಳವಾಗಿ ನಾಟಿದ ಒಂದು ಸಂಸ್ಕೃತ ಶ್ಲೋಕದಲ್ಲಿನ ಸಾರವನ್ನು ವಿವರಿಸುತ್ತ, ಅಂತೆಯೇ ಅವರನ್ನು ಬಹಳವಾಗಿ ಸೆಳೆದ ಇತರ ಕವಿಗಳ ಪದ್ಯವನ್ನು ಓದಿ, ಗೋಪಾಲ ಕೃಷ್ಣ ಅಡಿಗರಲ್ಲಿ ಅವರು ಮೆಚ್ಚಿಕೊಳ್ಳುವ ಅಂಶವನ್ನು ಹಂಚಿಕೊಂಡರು. ನಾಗಶೈಲ ಕುಮಾರ್ ಅವರು "ಯಾದ್ ವಶೇಮ್" ಎಂಬ ಪುಸ್ತಕವನ್ನು ಪರಿಚಯಿಸುತ್ತಾ, ಹೇಗೆ ಪರಿಸ್ಥಿತಿ ವಿಕೋಪಗಳು ಒಂದು ಕಥೆಯ ವಸ್ತುವಾಗಬಹುದು ಎಂದು ಒತ್ತಿ ಹೇಳಿದರು. ಅವರ ಮಾತಿಗೆ ಸ್ಪಂದಿಸುತ್ತಾ ಸಭಿಕರೊಬ್ಬರಾದ ರಾಜೇಶ್ವರಿಯವರೂ "ಯಾದ್ ವಶೇಮ್" ತಾವೂ ಮೆಚ್ಚುವ ಪುಸ್ತಕವೆಂದು ಶಿಫಾರಸ್ಸು ಮಾಡಿದರು. ನಂತರ ಮಾತನಾಡಿದ ಶ್ರೀ ಹರೀಶ ಗುರಪ್ಪನವರು ತಮ್ಮ ಮೆಚ್ಚಿನ ಬರಹಗಾರರಾದ ಕುಂ. ವೀರಭದ್ರಪ್ಪನವರ "ಗಾಂಧೀ ಕ್ಲಾಸ್" ಅನ್ನು ಪರಿಚಯಿಸುತ್ತ ಅದರ ಕೆಲವು ಭಾಗಗಳನ್ನು ಓದುವ ಮೂಲಕ ತಾವು ಏನನ್ನು ಆ ಬರಹಗಾರರಲ್ಲಿ ಇಷ್ಟಪಡುತ್ತೇನೆ ಎಂದು ಉದಾಹರಿಸಿದರು.

ಹೀಗೆ ವಿವಿದ ಸಾಹಿತ್ಯಾಸಕ್ತರು ತಮ್ಮ ತಮ್ಮ ಅನುಭವಸಾರವನ್ನು ನೆರೆದಿದ್ದ ಜನಕ್ಕೆ ಕೊಟ್ಟಾಗ, ಅಲ್ಲಿದ್ದ ಜನರೆಲ್ಲರ ಒಕ್ಕೊರಲು "ಇಂತಹ ಸಂವಾದಗಳು ಮತ್ತೆ ಹೆಚ್ಚು ಹೆಚ್ಚು ನಡೆಯಬೇಕು" ಎನ್ನುವುದಾಗಿತ್ತು. ಸಿಡ್ನಿ ಕನ್ನಡ ಶಾಲೆಯ ಅಭಿವೃದ್ಧಿಗೆ ಕರ್ನಾಟಕ ಸರ್ಕಾರಕ್ಕೆ ಸಲ್ಲುವಂತೆ ಪ್ರಾಧಿಕಾರದ ಅಧ್ಯಕ್ಷರಾದ ಹನುಮಂತಯ್ಯನವರಿಗೆ ಅರ್ಜಿಯನ್ನೂ ಸಲ್ಲಿಸಲಾಯಿತು.

ಸಂಗೀತ, ನೃತ್ಯ, ನಾಟಕ ಮುಂತಾದ ಶ್ರವ್ಯದೃಶ್ಯಮಾಧ್ಯಮವು ಜನರನ್ನು ಸೆಳೆಯುವುದು ಸಹಜ. ಆದರೆ ಈ ಸಮಾರಂಭಕ್ಕೂ ಆಸಕ್ತರು ಪಾಲ್ಗೊಂಡಿದ್ದರು ಎನ್ನುವುದು ವಾಸ್ತವ. ವರದಿಯ ಸತ್ಯಕ್ಕೆ, ಸಭೆಯಲ್ಲಿ ತುಂಬಿ ತುಳುಕಾಡುವಷ್ಟು ಜನರಿದ್ದರು ಎಂದು ಅಸತ್ಯ ಬರೆಯದಿದ್ದರೂ, ಸೇರಿದ್ದ ಜನರಲ್ಲಿ ಉತ್ಕಟವಾದ ಸಾಹಿತ್ಯಾಭಿಮಾನವು ತುಂಬಿ ತುಳುಕಾಡುತ್ತಿತ್ತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ▪

ಸಿದ್ನಿ ಕನ್ನಡ ಶಾಲೆಯ ಹತ್ತನೆಯ ವಾರ್ಷಿಕೋತ್ಸವದ ಅಂಗವಾಗಿ, ಭಾನುವಾರ 8 ನವೆಂಬರ್ 2015 ರಂದು ಮಧ್ಯಾಹ್ನ ಮೂರು ಘಂಟೆಗೆ ಟೂಂಗಾಬೀ ಈಸ್ಟ್ ಪಬ್ಲಿಕ್ ಸ್ಕೂಲಿನಲ್ಲಿ ಎರಡು ನಾಟಕಗಳನ್ನು ಪ್ರದರ್ಶಿಸಲಾಯಿತು. ಅದರ ಸಂಕ್ಷಿಪ್ತ ವರದಿ.

1. ಏಕೀಕರಣ (ರಚನೆ: ಬೀChi)

ಮುಖ್ಯ ಪಾತ್ರಗಳು (ಪಾತ್ರಧಾರಿಗಳು)

ಸೂತ್ರಧಾರ : ನಾರಾಯಣ ಕನಕಾಪುರ

ನರಸಮ್ಮ: ದೇಸಾಯರ ತಾಯಿ (ಶ್ರೀಮತಿ ವೀಣಾ ಸುದರ್ಶನ್)

ಹನುಮಂತ ಕೊನ್ಹೇರ ದೇಸಾಯಿ: ಅಡ್ವೋಕೇಟ್ (ಶ್ರೀ ಶ್ಯಾಮ್ ಸಿಂಗ್)

ವೆಂಕಟಲಕ್ಷ್ಮಿ: ದೇಸಾಯರ ಹೆಂಡತಿ (ಶ್ರೀಮತಿ ಅಪರ್ಣಾ ನಾಗಶಯನ)

ಕೃಷ್ಣ: ಅನ್ನದಾತ-ಅಡಿಗೆಮಾಣಿ (ಶ್ರೀ ಬೆಳ್ಳಾವೆ ನಾಗಶಯನ)

ರಹೋತ್ತರಾವು : ಅತಿಥಿ (ಶ್ರೀ ಮಹೇಂದ್ರ ಸಿಂಗ್)

ಗದಗಿನ ಅಡ್ವೋಕೇಟ್, ಬಳ್ಳಾರಿಯ ಅವರ ತಾಯಿ, ಕೋಲಾರದ ಅವರ ಕಿರಿಯ ಹೆಂಡತಿ, ಕುಂದಾಪುರದ ಅವರ ಮಾಣಿ ಮತ್ತು ಕೊಯಮತ್ತೂರಿನ ಅತಿಥಿ ಇವರೆಲ್ಲರೂ ಮಾತನಾಡುವುದು ಒಂದಲ್ಲ ಒಂದು ಬಗೆಯ ಕನ್ನಡವಾದರೂ, ಒಬ್ಬರು ಹೇಳಿದ್ದು ಇನ್ನೊಬ್ಬರಿಗೆ ಅರ್ಥವಾಗುವುದಿರಲಿ, ಅಪಾರ್ಥವಾಗುವುದೇ ಹೆಚ್ಚು. ಈ ಪ್ರಹಸನವನ್ನು ಬೀChi ಅವರು ಬರೆದು 50 – 60 ವರ್ಷಗಳಾಗಿದ್ದರೂ, ಇದರ ಹಾಸ್ಯ ಸ್ವಲ್ಪವೂ ಮಾಸಿಲ್ಲ. ಭಾನುವಾರ ನಮಗೆ ನೀಡಿದ ಪ್ರದರ್ಶನವನ್ನು ನೋಡುವಾಗಲಂತೂ ಸೂತ್ರಧಾರನ ಉಪೋದ್ಘಾತದಿಂದ ನಾಟಕದ ಕೊನೆಯವರೆಗೆ ನಮ್ಮ ನಗೆಗೆ ತಡೆಯೇ ಇರಲಿಲ್ಲ.

ಮೂಲದಲ್ಲಿ ವೆಂಕಟಲಕ್ಷ್ಮಿ ತನ್ನ ಗಂಡನ ಕಂಕುಳಲ್ಲಿ ಸೂಟ್ ಕೇಸ್ ಅನ್ನು ಇರಿಸಿ ಅವನ ತಲೆಯ ಮೇಲೆ ದೊಡ್ಡ ಹಾರನ್ ಉಳ್ಳ ಗ್ರಾಮಫೋನ್ ಪೆಟ್ಟಿಗೆಯನ್ನು ಇಡುವಳು. ಪ್ರಾಯೋಗಿಕ ತೊಂದರೆಗಳಿಂದ ಇದನ್ನು ಮಾಡಲಾಗಲಿಲ್ಲ ಎಂದು ತೋರುತ್ತದೆ. ಆದರೆ ಇದನ್ನು ಊಹಿಸಿಕೊಂಡರೆ ಸಾಕು, ನಗೆ ಉಕ್ಕಿ ಬರುತ್ತದೆ. ಗದಗಿನ ಲಾಯರಿಯ ತಲೆಯ ಮೇಲೆ ಮೈಸೂರಿನ ಸರಿಗೆ ರುಮಾಲು ಏಕೆ ಬಂತು ಎಂದು ನನಗೆ ಒಂದು ಕ್ಷಣ ಅನಿಸಿದರೂ, ಇದು ವೆಂಕಟಲಕ್ಷ್ಮಿಯ ಪ್ರಭಾವವೇ ಇರಬೇಕು ಎಂದು ಅರ್ಥಮಾಡಿಕೊಂಡೆ. ನಾಟಕದ ಅಂತ್ಯ ಮೂಲಕ್ಕಿಂತ ಸ್ವಲ್ಪ ಭಿನ್ನವಾಗಿತ್ತು. ಆದರೆ ಇದರಿಂದ ನಾಟಕದ ಹಾಸ್ಯಕ್ಕೂ, ಸಂದೇಶಕ್ಕೂ ಯಾವ ರೀತಿಯ ಕುಂದೂ ಆಗಲಿಲ್ಲವೆಂದೇ ನನ್ನ ಅಭಿಪ್ರಾಯ.

ಈ ನಾಟಕದ ತರುವಾಯ ಸುಮಾರು ಅರ್ಧ ಘಂಟೆ ವಿರಾಮವಿದ್ದು ಬಂದಿದ್ದ ಪ್ರೇಕ್ಷರಿಗೆ ರುಚಿಯಾದ ತಿನಿಸುಗಳು ಮತ್ತು ಸೊಗಸಾದ ಕಾಫಿಯನ್ನು ಸೇವಿಸಲು ಅವಕಾಶವಾಯಿತು.

2. ಮನಸ್ಸಿಗೆಷ್ಟು ಮುಖಗಳು (ರಚನೆ: ಪ್ರಕಾಶ್ ಕಂಬತ್ತಳ್ಳಿ)

ಮುಖ್ಯ ಪಾತ್ರಗಳು (ಪಾತ್ರಧಾರಿಗಳು)

ಅಜ್ಜಿ: ಮನೆಯೊಡತಿ - (ಗೀತಾ ಹಿರೇಮಠ್)

ಸುಬ್ಬಣ್ಣ: ದೊಡ್ಡ ಮಗ - (ಮನೋಹರ್ ರಾಜಶೇಖರ್)

ಸರಸ್ವತಿ: ದೊಡ್ಡ ಸೊಸೆ - (ನಿರ್ಮಲ ಮನೋಹರ್)

ನಾಗಣ್ಣ: ಕಿರಿಯ ಮಗ (ಶ್ರೀ ಗುರಪ್ಪ ಹರೀಶ)

ಸೀತಾ: ಕಿರಿಯ ಸೊಸೆ (ಸುನೀತ ಹರೀಶ್)

ರವಿ: ಸುಬ್ಬಣ್ಣ/ಸರಸ್ವತಿಯರ ಮಗ (ಮಹೇಂದ್ರ ಸಿಂಗ್)

ಗಿರಿಜಾ: ನಾಗಣ್ಣ/ಸೀತೆಯರ ಮಗಳು (ಮಾನಸ ಬಾಬು)

ಡಾಕ್ಟರು (ಶ್ರೀ ಶ್ಯಾಮ್ ಸಿಂಗ್); ಲಾಯರು (ಬಸವರಾಜ್ ಮಠಪತಿ); ತಂಗಿ (ಶ್ರೀಮತಿ ವೀಣಾ ಸುದರ್ಶನ್)

ಎರಡೂ ನಾಟಕಗಳಿಗೆ ತಾಂತ್ರಿಕ ಸಹಾಯ:

ಸುದರ್ಶನ್ - ಸಂಗೀತ ಸಂಯೋಜನೆ ಮತ್ತು ಧ್ವನಿ ನಿರ್ವಹಣೆ

ಸಾರಂಗ - ಬೆಳಕು ಮತ್ತು ರಂಗಸಜ್ಜಿಕೆ

ಅನ್ಯೋನ್ಯ ಪ್ರೀತಿಯಿಂದ, ಸಂತಸ, ಸೌಹಾರ್ದದಿಂದ ಕೂಡಿದ ಕುಟುಂಬದ ಕಥೆ ಇದು. ಅಜ್ಜಿ ಇದ್ದಕ್ಕಿದ್ದಂತೆ (ನಿಜವಾಗಿಯೋ, ಅಥವಾ ತನ್ನವರನ್ನು ಪರೀಕ್ಷಸಲೆಂದೋ) ಅಸ್ವಸ್ಥಳಾಗುತ್ತಾಳೆ. ಮೊದಲು ಎಲ್ಲರಿಗೂ ಗಾಬರಿಯಾಗುತ್ತದೆ. ಡಾಕ್ಟರನ್ನು ಕರೆಸುತ್ತಾರೆ. ಅನಂತರ ಒಂದು ವೇಳೆ ಅಜ್ಜಿಯು ಕೊನೆಯುಸಿರೆಳೆದರೆ, ಆಕೆಯ ಹಾಸಿಗೆಯ ಕೆಳಗಿರುವ ಪೆಟ್ಟಿಗೆಯಲ್ಲಿ ಇರಬಹುದಾದ ಒಡವೆ ಮತ್ತು ಹಣ ಯಾರಿಗೆ ಸೇರಬೇಕು ಎಂಬ ವಿಚಾರದಲ್ಲಿ ಚರ್ಚೆ ಶುರುವಾಗಿ ಎಲ್ಲರಲ್ಲೂ ಮನಸ್ತಾಪ ಮತ್ತು ಪರಸ್ಪರ ಜಗಳಗಳು ಆರಂಭವಾಗುತ್ತವೆ. ಇದರ ಪರಿಹಾರ ಹೇಗಾಗುತ್ತದೆ ಎಂಬುದು ಮುಂಬರುವ ಸರಳವಾದ ಮತ್ತು ಅಲ್ಲಲ್ಲಿ ನಗೆಬರಿಸುವ ಸಂಭಾಷಣೆಗಳಲ್ಲಿ ಮತ್ತು ಸಾಂಕೇತಿಕ ಅಂತ್ಯದಲ್ಲಿ ಪ್ರೇಕ್ಷಕರಿಗೆ ಅರಿವಾಗುತ್ತದೆ.

ಎರಡೂ ನಾಟಕಗಳ ನಿರ್ದೇಶಕಿ ಶ್ರೀಮತಿ ವೀಣಾ ಸುದರ್ಶನ್. ಪ್ರಸ್ತುತ ಪ್ರದರ್ಶನದಲ್ಲಿ ದೃಶ್ಯದಿಂದ ದೃಶ್ಯಕ್ಕೆ ಮಾರ್ಪಾಟು ಸಹಜವಾಗಿ, ಸುಲಭವಾಗಿ ಗಡಿಬಿಡಿಯಿಲ್ಲದೆ ಆಗುತ್ತಿದ್ದುದು ಅವರ ಉತ್ತಮ ನಿರ್ದೇಶನಕ್ಕೆ ಒಂದು ಸಾಕ್ಷಿ. ಇದು ಮಾತ್ರವಲ್ಲ, ಪಾತ್ರಧಾರಿಗಳೆಲ್ಲರಲ್ಲೂ ಅವರವರ ಅಭಿನಯಗಳಲ್ಲಿ ಉತ್ಕೃಷ್ಟತೆಯನ್ನು ತರಲು ಅವರು ಯಶಸ್ವಿಯಾಗಿದ್ದರು

ಸುದರ್ಶನ ಮತ್ತು ಸಾರಂಗ ಅವರ ರಂಗದ ಮೇಲಿನ ದೀಪಗಳ ಬೆಳಕು ಮತ್ತು ಧ್ವನಿಗಳ ಸಂಯೋಜನೆ ಶ್ರೇಷ್ಠ ಗುಣಮಟ್ಟದಾಗಿತ್ತು. ಒಟ್ಟಿನಲ್ಲಿ ನಾಟಕಗಳೆರಡೂ ಪ್ರೇಕ್ಷಕರನ್ನು ನಿರಂತರವಾಗಿ ರಂಜಿಸಿದುವು ಎಂಬುದರಲ್ಲಿ ಸಂದೇಹವಿಲ್ಲ. ▪

ವಿಚಾರ ವಿಹಾರ

ಮಾಲು, ಅಡಿಲೈಡ್

ಒಳ್ಳೆಯ ವಿದ್ಯೆ

ಈ ಬಾರಿಯ ವಿಚಾರ ಶ್ರೀ ಜಿ.ಪಿ.ರಾಜರತ್ನಂ ರವರ 'ವಿಚಾರ ರಶ್ಮಿ'ಯ ಒಂದು ರಶ್ಮಿ.

ಗುರುಕುಲದಲ್ಲಿ ವಿದ್ಯೆ ಕಲಿಯುತ್ತಿದ್ದ ಒಬ್ಬ ಶಿಷ್ಯ ಒಮ್ಮೆ ಸಮುದ್ರ ತೀರದಲ್ಲಿ ಕುಳಿತು, ಅಲೆಗಳು ಬರುವುದನ್ನು ಹೋಗುವುದನ್ನು ನೋಡುತಿದ್ದ.

ಆ ವೇಳೆಯಲ್ಲಿ ಒಣಗಿದ ಹುಲ್ಲು ಕಡ್ಡಿಯೊಂದು ಗಾಳಿಯಲ್ಲಿ ತೇಲಿಬಂದು ಸಮುದ್ರದಲ್ಲಿ ಬಿತ್ತು. ಅಲೆಗಳು ಅದನ್ನು ಒಳಕ್ಕೆ ಸೇರಿಸಿಕೊಳ್ಳದೆ ದಡಕ್ಕೆ ತಳ್ಳಿದವು.

ಆ ಒಣಗಿದ ಹುಲ್ಲುಕಡ್ಡಿ ದಡದಲ್ಲಿ ನಿಲ್ಲದೆ ಪುನಃ ಸಮುದ್ರದೊಳಕ್ಕೆ ಹೋಗಲು ಪ್ರಯತ್ನಿಸುತ್ತಿತ್ತು. ಅದು ಹಾಗೆ ಒಳಕ್ಕೆ ಬಂದಾಗಲೆಲ್ಲ ಸಮುದ್ರ ಅದನ್ನು ಹೊರಕ್ಕೆ ದೂಡುತಿತ್ತು. ಆ ಶಿಷ್ಯ ಈ ಹೋರಾಟವನ್ನು ನೋಡಿದ. ಹುಲ್ಲು ಕಡ್ಡಿ ಹಠವನ್ನು ಮೆಚ್ಚಿಕೊಂಡ. ಆದರೆ ಆ ಸುಮುದ್ರದ ವರ್ತನೆ ಅವನಿಗೆ ಇಷ್ಟವಾಗಲಿಲ್ಲ.

'ಸಮುದ್ರ ಅಗಾಧ ಎನ್ನುತ್ತಾರೆ, ಅಪಾರ ಎನ್ನುತ್ತಾರೆ. ರತ್ನಾಕರನೆಂದು ಪ್ರಸಿದ್ಧವಾದ ಸಮುದ್ರ ಈ ಅಲ್ಪವಾದ ಹುಲುಕಡ್ಡಿಗೂ ತಾನು ಏಕೆ ಆಶ್ರಯ ಕೊಡಬಾರದು? ವೈಶಾಲ್ಯಕ್ಕೆ ತಕ್ಕ ಹಾಗೆ ಔದಾರ್ಯವೂ ಇದ್ದರೆ ಎಷ್ಟು ಚೆನ್ನಾಗಿರುತ್ತದೆ!' ಎಂದು ಕೊಂಡ.

ತತ್ ಕ್ಷಣವೇ ಒಂದು ಅಶರೀರ ವಾಣಿ

'ಹೌದಪ್ಪ, ಹೌದು. ಔದಾರ್ಯ ಇರಬೇಕು. ಆದರೆ ಪಾತ್ರ ಅಪಾತ್ರ ಎಂಬುದನ್ನು ತಿಳಿದು, ಹತ್ತಿರ ಸೇರಿಸಿಕೊಳ್ಳಬೇಕು, ಅಲ್ಲವೇ?! ಒಂದು ಕಾಲದಲ್ಲಿ ನಾನು ಸಿಹಿನೀರಿನ ಮಯ ಆಗಿದ್ದೆ. ನನ್ನ ಮೈಯೆಲ್ಲಾ ಸಿಹಿಯ ತಾಣವಾಗಿತ್ತು. ಒಂದು ಸಲ ಯಾವುದೊ ಒಂದು ಲವಣ ಈ ಒಣ ಕಡ್ಡಿಯ ತರಹ ಬಂದು ಆಶ್ರಯ ಕೇಳಿತು, ಕೊಟ್ಟೆ! ಆ ಲವಣದ ಜೊತೆ ಇತರ ಲವಣಗಳು ಬಂದು ಸೇರಿಕೊಂಡು ನನ್ನ ಮೈಯೆಲ್ಲಾ ಲವಣ ಮಯ, ನಾನು ಉಪ್ಪು ಕ್ಷಾರ. ದುಷ್ಟರನ್ನು ಹತ್ತಿರ ಸೇರಿಸಿಕೊಂಡರೆ ಏನು ದುರ್ಗತಿ ಬರುತ್ತದೆಂಬುದನ್ನು ಅರಿತಿದ್ದೇನೆ' ಎಂದು ತಿಳಿಸಿ ಅಶರೀರ ವಾಣಿ ಮೌನವಾಯಿತು.

'ಹೌದು, ಈ ಅಶರೀರ ವಾಣಿ ಸಮುದ್ರವೇ ಇರಬೇಕು. ಇದು ಹೇಳಿದ್ದು ಅಕ್ಷರಸಹ ನಿಜ' ಎಂದುಕೊಂಡು, ಮರಳಿ ತನ್ನ ಗುರುಕುಲದ ಕಡೆಗೆ ನಡೆದ ಆ ಶಿಷ್ಯ.

ನಾವು ಕೂಡ ಅಷ್ಟೆ. ನಮ್ಮ ಒಳ ಸ್ನೇಹಿತರ ವೃತ್ತದಲ್ಲಿ ಯಾರನ್ನು ಬರಮಾಡಿಕೊಳ್ಳ ಬೇಕು ಎಂಬುವ ಪ್ರಜ್ಞೆ ಆ ಸಮುದ್ರಕ್ಕೆ ಇರುವಂತೆ ನಮಗೂ ಇರಬೇಕು.

ಆ ಸಮುದ್ರ 'ಒಂದು ಹುಲು ಕಡ್ಡಿ ತಾನೇ' ಎಂದು ಅದನ್ನು ತನ್ನಲ್ಲಿ ಬರಮಾಡಿಕೊಂಡಿದ್ದರೆ, ಅಂತಹ ನೂರಾರು ಕಡ್ಡಿಗಳು ಸೇರಿ ಸಮುದ್ರ ಮುಚ್ಚಿ ಹೋಗುತಿತ್ತು.

ಅಲ್ಪವೆಂದೂ ಯಾವುದನ್ನೂ ನಿರ್ಲಕ್ಷ್ಯ ಮಾಡಬಾರದು. ನಾವು ಅಷ್ಟೇ, ಒಂದು ಸಣ್ಣ ದುರ್ಗುಣವನ್ನು ಕೂಡ ನಮ್ಮಲ್ಲಿ ಪ್ರವೇಶಿಸದಂತೆ ಎಚ್ಚರವಿದ್ದರೆ ನಮಗೆ ಮತ್ತು ನಮ್ಮ ಜೊತೆಯಲ್ಲಿ ಇರುವವರಿಗೆ ಹಿತ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ನಂ ಕನ್ನಡ ಮೇಷ್ಟ್ರುಗೋಳು

ಈಗಿನ ಶಿಕ್ಷಣಮಟ್ಟ ಕುಸಿದಿದೆ. ಶಿಕ್ಷಕರ ಅರ್ಹತೆಯೇ ಕಡಿಮೆಯಾಗಿಬಿಟ್ಟಿದೆ ಎನ್ನುವ ಮಾತು ನಿಜವೋ, ಸುಳ್ಳೋ ಎಂದು ಪರೀಕ್ಷಿಸಲು ಶ್ರೀವನಿತೆಯರಸನೆ ವಿಮಲರಾಜೀವ ಪೀಠನ ಪಿತನೆ! ಜಗಕತಿ ಪಾವನನೆ ಸನಕಾದಿ ಜನನಿಕರ ದಾತಾರ! ಎಂಬ ಸಾಲನ್ನು ಹಲವಾರು ಕನ್ನಡ ಮೇಷ್ಟ್ರುಗಳಿಗೆ ನೀಡಿ ಅರ್ಥವನ್ನು ಹೇಳಿರೆಂದು ಪ್ರಾರ್ಥಿಸಿ ಕುಳಿತೆ.

"ಇಟ್ ಈಸ್ ಎ ನೈನ್ ವರ್ಡ್ ನೇಮ್; ಳಾಂಗ್ ನೇಮ್ ಆಫ್ ಎ ಮ್ಯಾನ್" ಎಂದನೊಬ್ಬ ಕಾನ್ವೆಂಟ್ ಶಿಕ್ಷಕ

"ಐಸೀ! ಹೌ ಡಿಡ್ ಯೂ ಅರೈವ್ ಎಟ್ ದಿಸ್ ಕಂಕ್ಲೂಶನ್ನು?"

"ಶುಲಪವೇ. ಎನಿಥಿಂಗ್ ಶ್ರೀಯಿಂದ ಬಿಗಿನ್ ಆದ್ರೆ ಮೇಲ್; ಶ್ರೀಮತಿಯಿಂದ ಶುರುವಾದ್ರೆ ಫೀಮೇಲ್!"

ಮುಂದಿನ ಸರದಿ "ಕಾನ್ವೆಂಟ್ ಎಂದರೇನು?" ಎಂದರೆ 'ಹಿಂದಿಯಲ್ಲಿ ಕಾನ್ ಅಂದ್ರೆ ಕಿವಿ; ಇಂಗ್ಲಿಷಲ್ಲಿ ವೆಂಟ್ ಅಂದ್ರೆ ದ್ವಾರ; ಸೋ ಕಿವಿ ತಮಟೆಯವರೆಗೆ ಜಾನ್ಸನ್ ಬಡ್ಸ್ ಗಾಗೇ ಇರುವ ಕೊಳವೆಯಾಕಾರದ ಎಂಟ್ರೆಯೇ ಕಾನ್ವೆಂಟ್' ಎಂದು ಅರ್ಥೈಸುವುದರ ಮೂಲಕ ಫೇಮಸ್ ಆದ ಪದಚ್ಛೇದ ಪಂಡಿತ ಎಂದೇ ಹೆಸರಾಗಿದ್ದ ಶಿಕ್ಷಕನದು.

"ಶ್ರೀ ಅಂದರೆ ದುಡ್ಡು. ವನಿತೆ ಅಂದ್ರೆ ಹೆಣ್ಣು. ದುಡ್ಡಿರೋ ಹೆಣ್ಣು, ಅಂದ್ರೆ ವರ್ಕಿಂಗ್ ವುಮನ್ ಅಂತ ಅರ್ಥ"

"ಅರಸನೆ ಅಂದ್ರೆ?"

"ಹುಡುಕುವುದಿಲ್ಲವೇ ಅಂತ ಸ್ವಾಮಿ. ಇಂತಹ ಹೆಣ್ಣುಗಳನ್ನೇ ವಧುವರಾನ್ವೇಷಣಾ ಕೇಂದ್ರಗಳಲ್ಲಿ ಅರಸುವುದು, ಹುಡುಕುವುದು. 'ಶ್ರೀವನಿತೆಯರಸನೇ?' = ಇಂತಹವರನ್ನು ಹುಡುಕದಿರುವವರು ಉಂಟೇ ಅಂತ ಅರ್ಥ"

"ವೆರಿಗುಡ್. ಮುಂದಿನದು - ವಿಮಲರಾಜೀವ ಪೀಠನ ಪಿತನೆ...."

"ಅದು ಕಾಂಗ್ರೆಸ್‌ನವರು ಹೇಳೋದು ಸಾರ್. ಕಮಲ ಅಂದ್ರೆ ನಮ್ಮದು; ವಿಮಲ ಅಂದ್ರೆ ವಿದೇಶದ ಕಮಲ; ಅಂದ್ರೆ ಸೋನಿಯಾ. ರಾಜೀವ ಅಂದ್ರೆ ರಾಜೀವ. ಅವರಿಬ್ಬರೂ ಕುಳಿತಿದ್ದ ಪೀಠಕ್ಕೆ ಪಿತನಾಗಿ ಅಂದರೆ ಅಧಿಪತಿಯಾಗಿ ಬರುತ್ತಿರುವ ರಾಹುಲನೇ ಅಂತ ಹೇಳಕ್ಕೆ ಈ ಸರ್ಕ್ಯೂಟಸ್ ರೂಟ್ ಅಷ್ಟೇ" ಎಂದರಾ ಕುಪಂಡಿತರು.

"ಆದರೆ ವರ್ಕಿಂಗ್ ವುಮನ್‌ಗೂ, ಇದಕ್ಕೂ ಲಿಂಕ್?"

"ರಾಹುಲ ಮದುವೆ ಆಗಿಲ್ಲವಲ್ಲ, ಒಳ್ಳೇ ಪೋಸ್ಟಲ್ಲಿರೋವ್ರನ್ನ ಹುಡುಕ್ತಿದಾನೆ ಅಂತ"

ಅಷ್ಟರಲ್ಲಿ ಪಕ್ಕದಲ್ಲಿ ಮಿನಿಬಾಂಬಿನೋಪಾದಿಯಲ್ಲಿ "ಐ ಆಬ್ಜೆಕ್ಟ್ ಯುವರ್ ಹಾರರ್. ಅದು ಬಿಜೆಪಿಯವರು ಹೇಳಿದ ರಾಷ್ಟ್ರಗೀತೆ" ಎನ್ನುತ್ತಾ ಒಬ್ಬ ಶಿಕ್ಷಕ ಸಿಡಿದೆದ್ದ.

"ಪ್ಲೀಸ್ ಎಲಾಬೊರೇಟ್ ಆನ್ ಯುವರ್ ಆಬ್ಜೆಕ್ಷನ್ ಸರ್" ಎಂದೆ.

"ಫಸ್ಟ್ ವರ್ಡ್‌ಗೆ ಅರ್ಥ ಆಮೇಲೆ ಇಡೋಣ. ಸೆಕೆಂಡ್ ವರ್ಡ್‌ನಲ್ಲಿ ವಿಮಲ ಮೀನ್ಸ್ ಕ್ಲೀನ್. ರಾಜೀವ ಮೀನ್ಸ್ ಲೋಟಸ್ - ಕಮಲ; ಬಿಜೆಪಿಯ ಸಿಂಬಲ್. ಬಿಜೆಪಿ ಈಸ್ ಎ ಕ್ಲೀನ್ ಪಾರ್ಟಿ ಅಂತ ಹೇಳಕ್ಕೆ ವಿಮಲರಾಜೀವ ಅಂತ ಹೇಳಿರೋದು"

"ಮುಂದೆ?"

"ಈ ಪೀರಿಯಡ್‌ಗೆ ಇಷ್ಟೇ. ನೆಕ್ಸ್ಟ್ ಕ್ಲಾಸಲ್ಲಿ ಅದನ್ನ ತೊಗೊಳ್ಳೋಣ"

ಇಂತಿಂತಹ ಅರ್ಥಗಳನ್ನು ಹೊಂದಲು ತಾಕತ್ತಿರುವುದರಿಂದಲೇ ಕನ್ನಡಭಾಷೆಯನ್ನು ನವನವೋನ್ಮೇಷಶಾಲಿ ಎಂದು ಕರೆಯುವುದಲ್ಲವೇ ಎಂದು ಚಿಂತಿಸುತ್ತಾ ಕುಳಿತೆ. ಕಬಾಬ್ ಮೇ ಹಡ್ಡಿ ಆಗಿ ಬಂದ ನಂತರದ ಶಿಕ್ಷಕಿ "ಅದು ಹೆಣ್ಣಿನ ನಾಲಿಗೆ ಬಹಳ ಹರಿತ ಅಂತ ಸಾರ್ ಹೇಳಿರೋದು. "ಹಣ, ಯೌವನ, ಅಂತಸ್ತು ಇವುಗಳಲ್ಲಿ ಯಾವುದೇ ಒಂದು ಇದ್ದರೂ ಮನುಷ್ಯನಿಗೆ ಅಹಂಕಾರ ಬರುತ್ತದೆ ಅಂತ ಒಂದು ಸುಭಾಷಿತ ಹೇಳಿದೆ ಸಾರ್" ಎಂದಳು.

ಮೆಚ್ಚಿದೆ. ಸಂಸ್ಕೃತವೂ ತಿಳಿದಿರುವ ಸುಸಂಸ್ಕೃತವಂತೆ. ಆಕೆಯತ್ತಲೇ ಕಿವಿಯಾಗಿ ಕುಳಿತೆ.

"ಶ್ರೀ ಅಂದ್ರೆ ಐಶ್ವರ್ಯ, ವನಿತೆ ಅಂದ್ರೆ ಸುಂದರಿ..."

"ವನಿತೆ ಅಂದ್ರೆ ಸುಂದರಿ ಅಂತ ಯಾವ ಡಿಕ್ಷ್ನರಿಯಲ್ಲಿದೆ?"

ಮುಂದಿನ ಪುಟ ನೋಡಿ ...

“ವುಮನ್ಸ್ ಡಿಕ್ಷನರಿ ಸಾರ್. ಎವೆರಿ ವುಮನ್ ಈಸ್ ಬ್ಯೂಟಿಫುಲ್ ಅನ್‌ಲೆಸ್ ಆಕ್ಟೆಡ್ ಅಪಾನ್ ಬೈ ಎ ಮೇಲ್ ಈಡಿಯಸಿ” ಎಂದಳಾಕೆ. ಆಕೆಯ ಬಗ್ಗೆ ಇದ್ದ ಮೊದಲ ಅಭಿಪ್ರಾಯವನ್ನು ಸರಿಪಡಿಸಿಕೊಂಡೆ. ಅಪಿಯರೆನ್ಸಸ್ ಕ್ಯಾನ್ ಬಿ ಡಿಸೀವಿಂಗ್ ಅನ್ನೋದು ಇದೇ ಕಾರಣಕ್ಕಿರಬೇಕು!

“ಹುಡುಗಿಯರು ಬ್ಯೂಟಿ ಕಾಂಶಿಯಸ್ ಅಂತ ಅಲ್ವಾ ಸಾರ್ ಇದು ಹೇಳೋದು...” ಆಗತಾನೇ ಟೀನೇಜಿಂದ ಜಂಪ್ ಆಗಿ ಹೊರಬಂದ ತರುಣಿ ಶಿಕ್ಷಕಿಯೊಬ್ಬಳು ನುಡಿದಳು.

“ಹೇಗೆ?”

“ಶ್ರೀವನಿತೆ ಅಂದ್ರೆ ಗಾಡ್ಲಿ ವುಮನ್ ಅಂತ ಸಾರ್... ಅಂದ್ರೆ ಗಾಡೆಸ್ ಅಂತ... ಅಷ್ಟು ಬ್ಯೂಟಿಫುಲ್ ಅಂತ”

“ಇದಕ್ಕೆ ಆಧಾರ?”

“ಶ್ರೀಲಕ್ಷ್ಮಿ, ಶ್ರೀಚಾಮುಂಡೇಶ್ವರಿ, ಶ್ರೀದುರ್ಗಿ ಅಂತಾರೆಯೇ ವಿನಹ ಶ್ರೀಮತಿ ಲಕ್ಷ್ಮಿ ಅನ್ನಲ್ಲ. ಸೋ ವನಿತೆ ವಿತ್ ಪ್ರಿಫಿಕ್ಸ್ ಆಫ್ ಶ್ರೀ ಈಸ್ ಗಾಡೆಸ್”

“ಒಪ್ಪಿದೆ. ಗೋ ಅಹೆಡ್”

“ದೇವತೆಯಂತಹ ರಸನೆ - ಅಂದರೆ ದಿನಕ್ಕೆರಡು ಸಾರಿ ಬ್ರಷ್ ಮಾಡ್ಕೊಳ್ತಾಳೆ. ಮೌತ್‌ವಾಷ್ ಹಾಕ್ಕೊಳ್ತಾಳೆ, ಆದ್ದರಿಂದ ನಾಲಿಗೆ ವಿಮಲವಾಗಿರುತ್ತದೆ. ಆಗಾಗ್ಗೆ ಬ್ಯೂಟಿಷಿಯನ್ ಹತ್ರ ಹೋಗೋದ್ರಿಂದ ಲಿಪ್ಸ್ ಸಾಫ್ಟ್ ಆಗಿ ಲೋಟಸ್ ಪೆಟಲ್ಸ್ ತರಹ ಇರತ್ತೆ. ಅದೇ ರಾಜೀವ. ಇನ್ನು ಪೀಠನ ಪಿತನೆ ಅಲ್ವಾ ಸಾರ್?”

ಮಾತು ಹೊರಡದ ಮಟ್ಟಕ್ಕೆ ತಬ್ಬಿಬ್ಬಾಗಿದ್ದರಿಂದ ಬರಿದೇ ತಲೆಯಾಡಿಸಿದೆ.

“ಪಿತನೆ ಅನ್ನೋದು ಅಬ್ರಿವಿಯೇಶನ್ ಸಾರ್. ಪೀಠನ ಅಂದರೆ ಸ್ಟೂಲ್ ಮೇಲೆ ಕೂತವನು/ಳು ಮಾಡುವ ಕೆಲಸಗಳಿಂದ ಸೌಂದರ್ಯ ಹೆಚ್ಚಿಸಿಕೊಳ್ಳುವವಳು ಅಂತ. ಪಿ ಫಾರ್ ಪೆಡಿಕ್ಯೂರ್, ತ ಫಾರ್ ತ್ರೆಡಿಂಗ್, ನೆ ಫಾರ್ ನೇಯ್ಲ್ ಪಾಲಿಷ್ ಅಥವಾ ಮ್ಯಾನಿಕ್ಯೂರ್. ಇದೆಲ್ಲ ಮಾಡಿಸಿಕೊಳ್ಳೋ ಹಾಡು ಸಾರ್ ಅದು. ಯಾರು ಸಾರ್ ಬರೆದದ್ದು ಈ ಮಾಡ್ರನ್ ಲೈನ್ಸು?”

“ಕುಮಾರ...” ಎನ್ನುತ್ತಿದ್ದಂತೆಯೇ ಅರ್ಧಕ್ಕೇ ತುಂಡರಿಸಿದ ಆ ಮಹಿಳೆ “ಅನ್ಕೊಂಡೆ ಸಾರ್. ಇಬ್ಬರು ಹೆಂಡತಿಯರ ಮಧ್ಯೆ ಇದ್ದರೆ ಇದೆಲ್ಲ ಗಮನಿಸಿರಲ್ವಾ... ಮೊದಲೇ ರಾಜಕಾರಣಿ; ಮಾತಿಗೇನು ಬರ ಇಲ್ಲ; ಲವ್ ಮಾಡಿರೋದ್ರಿಂದ ಕವನಾನೂ ಬರೆದಿದ್ದಾರೆ. ಗುಡ್ ಲೈನ್ಸ್ ಸಾರ್. ಗುಡ್ ಪೊಯೆಟ್ ನಮ್ಮ ಕುಮಾರಸ್ವಾಮಿಗಳು” ಎಂದುಲಿದಳು. ಮನಸ್ಸಿನಲ್ಲೇ ಹಣೆಹಣೆ ಚಚ್ಚಿಕೊಂಡೆ.

“ಫಸ್ಟ್ ಫಸ್ಟ್ ದು ಗೊತ್ತಾಗಲಿಲ್ಲ ಸಾರ್. ಆದರೆ ಸನಕಾದಿ ಜನನಿಕರ ದಾತಾರ ಅಂದ್ರೆ ನನಗೆ ಗೊತ್ತು” ಉಲಿದ ಮತ್ತೊಬ್ಬ ಪದ ವಿಭಾಗ ಪಂಡಿತ; “ಸ ಅಂದ್ರೆ ಸಣ್ಣ ಉದ್ದಿಮೆಗಳು, ನ ಅಂದ್ರೆ ನಳ್ಳಿ ಹಿಡಿಯೋ ಯೋಜನೆ, ಕಾದಿ ಅಂದ್ರೆ ಚರಕದಿಂದ ಮಾಡ್ತಾರಲ್ಲ, ಅದು; ಕಾದಿ ಗ್ರಾಮೋದ್ಯೋಗದ್ದು; ಇವುಗಳಿಗೆಲ್ಲಾ ಜನನಿ ಅಂದ್ರೆ ಮಾತೃಸಂಸ್ಥೆ ಅಂದ್ರೆ ಸರ್ಕಾರವೇ ಕರ ಅಂದ್ರೆ ಟಾಕ್ಸ್ ಅನ್ನು, ದಾತಾರ – ದಾನ ಮಾಡುವಂತಹದು ಅಂದರೆ ಟ್ಯಾಕ್ಸ್ ಎಕ್ಸೆಂಪ್ಶನ್ ಕೊಡುವಂತಹದು ಅಂತ ಅಲ್ವಾ ಸಾರ್ ಅರ್ಥ?” ಎಂದ.

“ಧಿಕ್ಕಾರವಿರಲಿ ಗಂಡುಕುಲಕ್ಕೆ. ಶ್ರೀವನಿತೆ ಎಂದರೆ ಶ್ರೀ+ಈವ+ವನಿತೆ ಎಂದು ಅರ್ಥ. ಎಂದರೆ ವರದಕ್ಷಿಣೆ ಕೊಡುವವಳು ಎಂದು. ಶ್ರೀವನಿತೆಯರಸ ಎಂದರೆ ವರದಕ್ಷಿಣೆ ಕೊಟ್ಟು ಮದುವೆಯಾಗುವ ಹೀನ ಪ್ರಾಣಿ. ಅದು ವಿಮಲ ಅಲ್ಲ. ಮಲ. ಕೊಳಕ ಅವನು. ರಾಜೀವ ಎಂದರೆ ಕಮಲ. ಕಮಲ ಇರುವುದೇ ಕೆಸರಿನಲ್ಲಿ. ವರದಕ್ಷಿಣೆ, ಕಿರುಕುಳಗಳ ಕೆಸರಿನಲ್ಲಿ ಇರುವವನೇ ಶ್ರೀವನಿತೆಯರಸನಾದ ಮಲ ರಾಜೀವ” ಗುಡುಗಿದಳು ಹಚ್ಚಿಕೊಂಡಿದ್ದ ಕೆಂಪು ಲಿಪ್‌ಸ್ಟಿಕ್‌ಗಿಂತಲೂ ಕೆಂಪಾದ ಕಣ್ಣುಗಳನ್ನು ಬಿರಬಿರನೆ ತಿರುಗಿಸುತ್ತಿದ್ದ ಲಲನೆ.

“ಇಕ್ರಲಾ, ವದಿರಲಾ... ಶ್ರೀವನಿತೆಯರಸ ಅಂದ್ರೆ ಕಾಸನ್ನೇ ಮದುವೆ ಆಗಿರೋವ್ನು ಅಂತ. ಅಂದ್ರೆ ಸಾಹುಕಾರ ಅಂದ್ರೆ ಬಂಡವಾಳಶಾಹಿ. ಇಂತಹವರಿಂದಲೇ ದಲಿತರ ಶೋಷಣೆ. ಧಿಕ್ಕಾರಾ, ಧಿಕ್ಕಾರಾ... ಎನ್ನುತ್ತಾ ಕೆಂಪು ಶರ್ಟಿನವನೊಬ್ಬ ಕಿರುಚಿದ.

ಪರಿಸ್ಥಿತಿ ತೀರ ಹದಗೆಡುವ ಮಟ್ಟಕ್ಕೆ ತಲುಪಿಯಾಗಿತ್ತು. ಕುಮಾರವ್ಯಾಸಭಾರತವನ್ನು ಮೆಲ್ಲಗೆ ಚೀಲಕ್ಕೆ ಹಾಕಿ, ಕೆಂಗಣ್ಣಿ, ಕೆಂಪ್ಶರ್ಟಿನವನ ಮಧ್ಯೆ ತೂರಿ ಬದುಕಿದೆಯಾ ಬಡಜೀವವೇ ಎನ್ನುತ್ತಾ ಬಾಗಿಲಿನ ವರೆಗೆ ಕಳ್ಳಹೆಜ್ಜೆ ಇಟ್ಟು, ಹೊಸ್ತಿಲು ದಾಟಿದ ನಂತರ ಓಓಓಟಕಿತ್ತೆ. ▪

ವಿಕ್ಟೋರಿಯಾದ ರಾಜ್ಯ ಪುಷ್ಪ – ಪಿಂಕ್ ಹೀತ್

ಆಸ್ಟ್ರೇಲಿಯಾದ ಹೂವುಗಳು

ಮಾಹಿತಿ ಸಂಗ್ರಹ: ಬದರಿ ತ್ಯಾಮಗೊಂಡ್ಲು

- ಆಸ್ಟ್ರೇಲಿಯಾದ ರಾಜ್ಯವಾದ ವಿಕ್ಟೋರಿಯಾದ ಪುಷ್ಪ ಲಾಂಛನವಾಗಿ ಪಿಂಕ್ ಹೀತ್ ಎನ್ನುವ ಈ ಪುಷ್ಪದ ಸಸ್ಯಶಾಸ್ತ್ರೀಯ ಹೆಸರು "ಎಪಾಕ್ಟೈಸ್ ಇಂಪ್ರೆಸ್ಸ"
- ಸುಮಾರು ಒಂದು ಮೀಟರ್ ಎತ್ತರಕ್ಕೆ ಬೆಳೆಯುವ ಈ ಪೊದೆಸಸ್ಯವು ತೀರ ಕೃಶವಾಗಿರುತ್ತದೆ. ತೊಟ್ಟುಗಳಿಲ್ಲದ ಸ್ವಲ್ಪ ದಪ್ಪವಾದ ಎಲೆಗಳನ್ನು ಈ ಹೂವಿನ ಗಿಡವು ಹೊಂದಿರುತ್ತದೆ.
- ಹಲವು ಪ್ರಭೇಧಗಳಿರುವ "ಎಪಾಕ್ಟೈಸ್ ಇಂಪ್ರೆಸ್ಸ" ಜಾತಿಯ ಪುಷ್ಪಗಳಲ್ಲಿ ಗುಲಾಬಿ ಬಣ್ಣದ "ಪಿಂಕ್ ಹೀತ್" ಅನ್ನು ವಿಕ್ಟೋರಿಯಾ ರಾಜ್ಯದ ಪುಷ್ಪ ಲಾಂಛನವಾಗಿ ೧೯೫೮ ರಲ್ಲಿ ಅಂಗೀಕರಿಸಲಾಯಿತು. ಪುಷ್ಪ ಲಾಂಛನವನ್ನು ತನ್ನ ರಾಜ್ಯಕ್ಕೆ ಜಾರಿ ಮಾಡಿದ ಮೊದಲ ರಾಜ್ಯವೆನ್ನುವ ಹೆಗ್ಗಳಿಕೆಯೂ ವಿಕ್ಟೋರಿಯಾಕ್ಕೆ ಇದೆ.
- ಕೊಳವೆಯಾಕಾರದ ಹೂವುಗಳು ಸುಮಾರು ಒಂದು ಇಂಚಿನಷ್ಟು ಇದ್ದು, ದಟ್ಟವಾಗಿ ಒಂದರ ಪಕ್ಕ ಒಂದರಂತೆ ಅರಳುವ ಕಾರಣ ಬ್ರಷ್ ನಂತೆ ಕಾಣುತ್ತದೆ.
- ಶರದೃತುವಿನ ಮಧ್ಯಭಾಗದಿಂದ ಚಳಿಗಾಲದ ಮಧ್ಯದವರೆಗೆ ಹೇರಳವಾಗಿ ಈ ಹೂವುಗಳು ಅರಳುತ್ತವೆ. ▪

ಪಿಂಕ್ ಹೀತ್ ಹೂವು

ಆಸ್ಟ್ರೇಲಿಯಾದ ಅಂಚೆ ಚೀಟಿಯಲ್ಲಿ ಪಿಂಕ್ ಹೀತ್

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಮೀಸೆ ಮುನಿಸ್ವಾಮಿ

ಲೇಖಕರು:
ನಾಗಶೈಲ ಕುಮಾರ್

ಧಗ ಧಗನೆ ಉರಿಯುತ್ತಿದ್ದ ಬೆಂಕಿಗೆ ಹೆದರುತ್ತಿರಲಿಲ್ಲ ಮುನಿಸ್ವಾಮಿ. ಭೀಮನ ಪಾತ್ರದಲ್ಲಿ ನಾಟಕದ ವೇದಿಕೆಯ ಮೇಲೆ ಅಬ್ಬರಿಸಿ ಪ್ರೇಕ್ಷಕರನ್ನು ನಡುಗಿಸುತ್ತಿದ್ದ ಮುನಿಸ್ವಾಮಿ. ಆದರೆ ಹೆಂಡತಿ ಎದುರಿಗಿರುವಾಗ ಮಾತ್ರ ಮೂಕ ಬಸವನಂತಿರುತ್ತಿದ್ದ. ಇಂತಹ ಮುನಿಸ್ವಾಮಿಯ ಬಹುಮುಖ ಪರಿಚಯವಾದದ್ದು ಹೀಗೆ...

ಚಿತ್ರಗಾರರು: ಅರ್ನಸ್ಟೋ ಮ್ಯುನೋಜ್

ಎಣ್ಣೆ ಹಚ್ಚಿ, ಚೆನ್ನಾಗಿ ತಿರುವಿ ಹುರಿಮಾಡಿದ ಮೀಸೆಯು, ಕತ್ತಿಯ ತುದಿಯಂತೆ ಚೂಪಾಗಿ ನಿಂತು ಆವನ ಮುಖದಲ್ಲಿನ ಪ್ರಮುಖ ಆಕರ್ಷಣೆಯಾಗಿತ್ತು. ಅವನ ಕೈಗಳು ಬಹಳಷ್ಟು ಸಮಯ ಆ ಮೀಸೆಯನ್ನು ತೀಡುವುದಕ್ಕಾಗಿಯೇ ಮುಡುಪಾಗಿದ್ದವು, ಸದಾ ಒಂದಲ್ಲ ಒಂದು ಕೈ ಮೀಸೆಯ ಮೇಲಿರುತ್ತಿತ್ತು. ನೆತ್ತಿಯ ಮಧ್ಯಭಾಗಕ್ಕೆ ಬೈತಲೆ ತೆಗೆದು ಬಾಚಿದ ಕೂದಲಲ್ಲಿ, ಅಲಲ್ಲಿ ಬಿಳುಪು ಮಿಶ್ರಿತವಾಗಿ ಮುಖಕ್ಕೊಂದು ಕಳೆ ತಂದಿತ್ತು. ಇನ್ನು ಆ ಕಣ್ಣುಗಳು ಕೆಂಡದುಂಡೆಗಳಂತಿದ್ದು, ಅತ್ತಿತ್ತ ಚಲಿಸದೆ ಅವಳತ್ತಲೇ ತಿರುಗಿದ್ದವು. ಎಲ್ಲಕ್ಕಿಂತ ಹೆಚ್ಚಾಗಿ ಅವನ ಗಂಭೀರ ಮುಖಮುದ್ರೆ, ಎಲ್ಲರ ನಡುವೆ ಅವನಿಗೊಂದು ವಿಶೇಷ ಸ್ಥಾನ ನೀಡಿತ್ತು. ಅವನನ್ನು ನೇರವಾಗಿ ದಿಟ್ಟಿಸಿ ನೋಡಲು ಹೆದರಿದ್ದೆವು. ಅಜ್ಜಿಯ ಹಿಂದೆಯೇ ನಿಂತು ಕೊಂಡು ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುತ್ತಿದ್ದೆವು.

"ಏನೋ ಮುನಿಸ್ವಾಮಿ ನಿನ್ನ ತಕರಾರು? ಎರಡು ದಿನ ಜಗಳ ಮಾಡ್ದೀರ ಇರಕ್ಕಾಗಲ್ವೇನ್ರೋ ನಿಮ್ ಕೈಲಿ. ಮೂರ್ಮೂರು ದಿನಕ್ಕು ವ್ಯಾಜ್ಯ ಮಾಡ್ಕೊಂಡು ನನ್ಮುಂದೆ ಬಂದು ಕೂತ್ಕೋತಿರಲ್ಲಾ, ನಂಗೇನು ಬೇರೆ ಕೆಲ್ಸ ಇಲ್ಲಾ ಅಂದ್ಕೊಂಡಿದ್ದೀರಾ?".

"ಯಾಜ್ಯ ಏನ್ ಮಾಡೋದ್ ಐನೋರೆ, ಈ ಮೂದೇವಿ ಬಾಯ್ಬಿಟ್ರೆ ತಾನೆ ಯಾಜ್ಯ ಆಗೋದು. ಮೂರೊತ್ತು ಆ ಕದ್ರನ್ ಜೊತೆ ಬದ್ಕಿಲ್ದೀರ ಅಲೀತಾನೆ, ಇಲ್ಲಾ ಅಂದ್ರೆ ಏರಿ ಬದೀನ ಈಚ್ಲು ಮರದ ಕೆಳಗೆ ಬಾಯ್ತೆಕ್ಕಂಡು ಚಂಜಿ ಆಗೋದೆ ಕಾಯ್ತಿರ್ತಾನೆ. ಎಂಡ್ತಿ ಅಂತ ಒಬ್ಳವ್ಳೆ, ಅವಳ್ಕೂಟೆ ವಸಿ ಮಾತಾಡಣ, ಅವಳ್ಗೇನ್ ಬೇಕು ಕೇಳಣ ಅನ್ನದೇನಾದ್ರೂ ಇದ್ಯಾ ಈ ಮುಂಡೇಗಂಡಂಗೆ".

ಮುನಿಸ್ವಾಮಿ ಹೆಂಡ್ತಿ ಗೋವಿಂದಮ್ಮ ಹಾಡಿಕೊಂಡು ಅತ್ತಳು.

"ಊರ್ನಾಗಿರೋ ಗಂಡ್ದೀರ್ಗೋಳೆಲ್ಲಾ ಎಂಡ್ರುನ್ನ ಬಳ್ಳಾಪುರಕ್ಕೆ ಕರ್ಕೊಂಡ್ ವೋಗಿ, ಸಿನ್ಮಾ ತೋರುಸ್ತಾರೆ, ಕರಗದಾಗೆ, ತೇರ್ನಾಗೆ, ಪೇಟೆಲೆಲ್ಲಾ ತಿರುಗಾಡ್ಸಿ, ಇಸ್ನು ಬವನ್ನಾಗ್ ತಿಂಡಿ ಕೊಡ್ಸಿ, ಸೀರೆ ರವ್ಕೆ ಎಲ್ಲಾ ಕೊಡ್ಸಿ ಕರ್ಕಂಬತ್ತಾರೆ. ಮೇಟ್ರೇ (ಮೇಷ್ಟ್ರೇ), ಇವ್ನು ಅವ್ನೆ ನೋಡಿ ನನ್ ಗಂಡ ಅಂತ ಯೇಳ್ಕೊಳ್ಳಾಕೆ, ನೀವಾರ ವಸಿ ಯೇಳಿ ಅವಂಗೆ ಯೆಂಡ್ತಿನ ಯೆಂಗ್ ನೋಡ್ಕ ಬೇಕೂ ಅಂತ".

ಅಷ್ಟು ಹೇಳಿದವಳೇ ನಮ್ಮ ತಾತನ ಪಕ್ಕದಲ್ಲಿ ನಿಂತಿದ್ದ ಅಜ್ಜಿಗೆ ಕೈಮುಗಿದು " ಆಹಾ, ಪ್ಯಾಟೆ ದ್ಯಾವಸ್ತಾನ್ ದಾಗಿರೋ ಮಾಲಕ್ಸ್ಮಿ ಇದ್ದಂಗಿದೀರ ಅಮ್ಮಣ್ಣೋರೆ ನೀವು, ಮೇಟ್ರು ಅದೇನ್ ಸಂದಾಕ್ ನೋಡ್ಕೊಂಡವ್ರೆ ನಿಮ್ನಾ, ಅದೇಸ್ ಕಿತ ಅಂದ್ಕಂಡಿವ್ನೋ , ಅಮ್ಮಣ್ಣೋರ್ ಜಾಗ್ದಾಗೆ ನಾನಾರ ಇರ್ಬಾರ್ದಿತ್ತಾ ಅಂತ", ನಿಟ್ಟುಸಿರು ಬಿಡುತ್ತಾ ನೆರಗಿನಲ್ಲಿ ಕಣ್ಣು ಮೂಗು ತೀಡಿಕೊಂಡಳು.

ತಾತ ಅಜ್ಜಿ ಇಬ್ರೂ ಗೊಳ್ಳಂತ ನಕ್ಕುಬಿಟ್ಟರು.

"ಸಾಕು ನಿಲ್ಸೆ ನಿನ್ ಪುರಾಣಾನ, ಆಹಾ ನೀನೋ, ನಿನ್ ಮಾತೋ ಒಂದಕ್ಕಿಂತ ಒಂದು ಅವತಾರ. ಅಲ್ವೇ, ನೀನೂ ಒಂಚೂರು ಸರಿಯಾಗಿ ಬಟ್ಟೆ ತೊಟ್ಕೊಂಡು, ತಲೆಗಿಲೆ ಬಾಚ್ಕೊಂಡು, ಅವನಿಗಿಷ್ಟಾಗಿರೋದನ್ನ ಹೊತ್ಗೆ ಸರಿಯಾಗಿ ಬೇಯ್ಸಿ ಹಾಕ್ಕೊಂಡಿದ್ರೆ, ಅವನಿಗು ಮನೇಲಿ ನೆಮ್ಮದಿ ಅನ್ನೋದಿರುತ್ತೆ, ಅದನ್ನ ಬಿಟ್ಟು ನೀನು ಗಂಡುಬೀರಿ ತರ ಮನೆ ಮನೆ ಸುತ್ಕೊಂಡು, ಎಲ್ಲಾರ ಮುಂದೆ ನಿನ್ ಗೋಳು ತೋಡ್ಕೋತಾ ಕಾಲ ಕಳೀತೀಯ. ಅಷ್ಟಕ್ಕೂ ಅವನೇನು ಕಮ್ಮಿ ಇಲ್ಲ ಬಿಡು ದಿವ್ನಾಗೇ ಇದ್ದಾನೆ, ಕಳೆಕಳೆಯಾಗಿ".

ಪುಟ್ಟಮ್ಮನೋರು ಹೇಳಿದ್ದೂ ಸರಿಯಾಗೇ ಇತ್ತು, ಎಣ್ಣೆ ನೀರು ಕಾಣದ, ಬಿರಿಹುಯ್ದ ಕೂದಲು, ಎಲೆ ಅಡಿಕೆ ಜಗಿದು ಜಗಿದು ಬಣ್ಣ ಕಳೆದುಕೊಂಡ ಹಲ್ಲುಗಳು, ಆಕಾರವಿಲ್ಲದ ಕುಬುಸ, ಕಾಟಾಚಾರಕ್ಕೆ ಮೈಮೇಲೆ ಸುತ್ತಿಕೊಂಡಿದ್ದ ಸೀರೆ. ಮೈ ಹಾಗು ಬಟ್ಟೆ ಎರಡೂ ಸಾಬೂನು ಕಂಡು ಅದ್ಯಾವ ಕಾಲವಾಗಿತ್ತೋ.

ಮುಂದಿನ ಪುಟ ನೋಡಿ ...

ಪುಟ್ಟಮ್ಮನವರ ಮಾತಿಗೆ ಮತ್ತಷ್ಟು ಜೋರಾಗಿ ಅಳುತ್ತಾ, "ಎಷ್ಟೇ ಆಗ್ಲಿ ನೀವು ಅವನ್ ಕಡೆನೇಯ, ಈ ಮಳ್ಳಿ ಕುಂತಿರಾದ ನೋಡು, ಏನಾದ್ರ ಮಾತಾಡ ಬಾರ್ದ", ಎಂದವಳು ಇದ್ದಕ್ಕಿದ್ದಂತೆ ಎದ್ದು ನಿಂತು "ನಿಂಗೆ ಗರ್ವ ಎಚ್ಚಾಗೈತೆ, ಈ ಐನಾತಿ ಮುಕಕ್ಕೆ ಮೀಸೆ ಬೇರೆ ಕೇಡು", ಎಂದು ಗಂಡನ ಮೇಲೆ ಹರಿಹಾಯ್ದು ಅವನ ಮೀಸೆಗೆ ಕೈ ಹಾಕಿದಳು.

ಹೆಂಡತಿ ಹತ್ತಿರ ಬರುತ್ತಿದ್ದಂತೆ ಹುಷಾರಾದ ಮುನಿಸ್ವಾಮಿ, "ಏಯ್ ಉಷಾರ್, ನೀನ್ ನಂಗೆ ಯೋನ್ ಬೇಕಾದ್ರು ಅನ್ನು, ಆದ್ರೆ ನನ್ ಮೀಸೆ ತಂಟೆಗೆ ಮಾತ್ರ ಬರ್ಬೇಡ, ಆಮ್ಯಾಗ್ ನಾಲ್ಕು ಕೊಟ್ಬುಬಿಡ್ತೀನ್".

"ಆಹಾಹ ಕೊಟ್ಬಿಡ್ತಾನಂತೆ ಕೊಟ್ಬಿಡ್ತಾನೆ, ಇಲ್ಲೀಗಂಟ ಒಂದ್ ಮಗೀನ್ ಕೊಡಕ್ಕಾಗಿಲ್ಲ, ನಾಕ್ ಏಟ್ ಕೊಡ್ತಾನಂತೆ, ಏನ್ ಸ್ಯಾನೆ ದೊಡ್ ಗಂಡ್ಸು ಇವ್ನು. ಸುಮ್ಗೆ ಕೂತ್ಕ ಕಂಡೀವ್ನಿ ನಿನ್ ಪೌರ್ಸಾನಾ".

ಗಂಡನ ಮೇಲೆ ಹರಿಹಾಯ್ದ ಗೋವಿಂದಮ್ಮ, ಪುಟ್ಟಮ್ಮನವರ ಕಡೆ ತಿರುಗಿ ಮತ್ತೆ ಗೊಳೋ ಎಂದು ಅಳಲಾರಂಭಿಸಿದಳು, "ಅಮ್ಮಣ್ಣೋರೆ ನಾನ್ ಆಗ್ಲೆ ಯೋಳ್ದೆ ನೋಡಿ ನಿಮ್ ಜಾಗದಾಗೆ ನಾನಿರ್ಬೇಕಿತ್ತು ಅಂತ, ನಿಮಗ್ ನೋಡಿ ಮನೆ ತುಂಬಾ ಮಕ್ಳು, ಅವರ್ ಮಕ್ಳು ಅವ್ರೆ, ನನಗಾರ ಯಾರವ್ರೆ ಅಮ್ಮಣ್ಣಿ. ಆ ಗೊಲ್ಲಳ್ಳಿ ಬೈಲಾಂಜನೇಯಂಗೆ, ಗುಟ್ಟಳ್ಳಿ ಗಾಳಿ ಅನ್ಮಂತ್ರಾಯಂಗೆ ಎಲ್ಲಾರ್ಗು ಅರ್ಕೆ ಒತ್ಕೊಂಡು, ಆಯಿತ್ ವಾರ, ಅಮಾಸಿ ಬಂದಾಗ ಗುಡಿಗ್ ಬಂದು ಉಳ್ಳು ಸೇವೆ ಮಾಡ್ತೀನಿ ಅಂತ ಕೇಳ್ಕಂಡಿವ್ನಿ".

ಮೇಷ್ಟ್ರು ನಗುತ್ತಾ ನುಡಿದರು, "ಅಲ್ವೆ ಗೋವಿಂದಮ್ಮ ಹೋಗಿ ಹೋಗಿ ಆ ಬ್ರಹ್ಮಚಾರಿ ದೇವರ್ಗೆ ಮಕ್ಳನ್ನ ಕೊಡು ಅಂತ ಹರಕೆ ಹೊತ್ಕೊಂಡಿದ್ದೀಯಾ, ಯಾರಾದ್ರು ಸಂಸಾರಿ ದೇವ್ರನ್ನ ಕೇಳ್ಕೊಬಾರದಿತ್ತೆ".

"ನೀವು ನನ್ನ ನಗಸಾರ ಮಾಡ್ತೀರಾ ಮೇಟ್ರೇ", ಗೋವಿಂದಮ್ಮನ ಅಳು ಮತ್ತಷ್ಟು ಜೋರಾಯಿತು.

"ಏ ಸಾಕು ನಿಲ್ಸೆ, ಬೆಳ್ ಬೆಳಗ್ಗೆ ಗಂಡ ಹೆಂಡ್ತಿ ಇಬ್ರೂ ಇಲ್ ಬಂದು ಕೂತ್ಕೊಂಡ್ ಬಿಡ್ತೀರಾ", ಪುಟ್ಟಮ್ಮ ರೇಗಿಕೊಂಡರು, ಗಂಡನ ಕಡೆ ತಿರುಗಿ "ಏನೂಂದ್ರೆ, ಏಳಿ ಸಾಕು, ಅವರಿಬ್ರೂದು ಹತ್ತಲ್ಲ ಹರಿಯಲ್ಲ. ಎಲೆ ಹಾಕಿ ದ್ದೀನಿ, ಕೈ ಕಾಲು ತೊಳ್ಕೊಂಡ್ ಊಟಕ್ಕೆ ಬನ್ನಿ. ಏ ಮುನಿಸ್ವಾಮಿ ಅದೇನೋ ಇವತ್ತು ರಾತ್ರಿ ನಾಟ್ಕ ಇದೆ ಅಂತಿದ್ಯಲ್ಲ, ಹೋಗಿ ಅದೇನು ಸಿದ್ದ ಮಾಡ್ಕೋಬೇಕೊ ನೋಡ್ಕೋ ನಡಿಯೋ".

****

ಅಂದು ರಾತ್ರಿ ಬಯಲಾಟದ ಏರ್ಪಾಡಾಗಿತ್ತು. ಏಪ್ರಿಲ್ ತಿಂಗಳದು, ಪರೀಕ್ಷೆಗಳು ಮುಗಿದು ಶಾಲೆಗಳು ಮುಚ್ಚಿದ್ದವು. ಹೊಲಗದ್ದೆಗಳಲ್ಲೂ ಕೊಯ್ಲಿನ ಕೆಲಸಗಳು ಮುಗಿದು ರೈತರಿಗೂ ಬಿಡುವು. ಕಣದ ಬಯಲಿನಲ್ಲಿ ನಾಟಕದ ವೇದಿಕೆ ಸಿದ್ಧವಾಗಿತ್ತು. ಊರಿನಲ್ಲಿ ಎರಡು ಕಣದ ಬಯಲುಗಳಿದ್ದವು. ಒಂದು ಊರಿನ ನಡುವೆಯೇ ಇದ್ದ ವಿಶಾಲವಾದ ಕಣದ ಅಂಗಳ, ಮತ್ತೊಂದು, ಊರಾಚೆಗೆ ಶಾಲೆಯ ಹಿಂಭಾಗ, ಕೆರೆಯ ಪಕ್ಕಕ್ಕಿದ್ದ ಬಲು ದೊಡ್ಡದಾದ ಕಣ.

ನಾಟಕ ನಡೆಯುತ್ತಿದ್ದುದು ಊರ ನಡುವಿದ್ದ ಕಣದಲ್ಲಿ. ಹಳ್ಳಿಯ ಜನರೆಲ್ಲಾ ಊಟ ಮುಗಿಸಿ, ಎಲೆಯಡಿಕೆ ಜಗಿಯುತ್ತಾ ಚಾಪೆ ಜಮಖಾನಗಳನ್ನು ಹಾಸಿಕೊಂಡು ಕಣದ ಬಯಲಿನಲ್ಲಿ ಸೇರುತ್ತಿದ್ದರು. ಅಷ್ಟು ವಿಶಾಲವಾದ ಕಣವನ್ನು ಸಗಣಿಯಿಂದ ಸಾರಿಸಿ ಶುಭ್ರವಾಗಿರಿಸಿದ್ದರು,

ರಜಾ ಕಾಲವಾಗಿದ್ದರಿಂದ ಅಜ್ಜನ ಮನೆಗೆ ಬಂದಿದ್ದ ನಾನು, ನಮ್ಮಣ್ಣ, ಅಕ್ಕ, ಮಾವನ ಮಕ್ಕಳು, ಪಕ್ಕದ ದೊಡ್ಡಜ್ಜನ ಮನೆಗೆ ಬಂದಿದ್ದ ಅವರ ಮೊಮ್ಮಕ್ಕಳು, ಎಲ್ಲರೂ ಸೇರಿ ನಾಟಕಕ್ಕೆ ಹೊರಡಲು ಕಾತರರಾಗಿದ್ದೆವು. ಮಕ್ಕಳು ತಿನ್ನಲೆಂದು ತಾತ ರಾತ್ರಿ ಊಟ ಮುಗಿದ ನಂತರ, ಕುಳಿತಲ್ಲಿಯೇ ಸಬ್ಬಕ್ಕಿ ಸೊಪ್ಪು, ಹಸಿಮೆಣಸಿನ ಕಾಯಿ, ಕಡಲೆ ಬೀಜ, ಈರುಳ್ಳಿ, ಎಲ್ಲಾ ಬೆರೆಸಿ ಬಿಸಿಬಿಸಿ ಪಕೋಡ ಮಾಡಿಕೊಟ್ಟರು. ಉಗ್ರಾಣದಲ್ಲಿದ್ದ ಮಡಕೆಗಳಿಂದ ಪುರಿ ಉಂಡೆ, ಪುಳ್ಳಂಗಾಯಿ ಉಂಡೆಗಳು ಹೊರಬಂದವು. ದೊಡ್ಡಜ್ಜನ ಮನೆಯಿಂದ ಘಾಟಿ ಸುಬ್ರಹ್ಮಣ್ಯದಿಂದ ತಂದಿದ್ದ ಕಡ್ಲೆಪುರಿ, ಬತ್ತಾಸು, ಕಲ್ಯಾಣ ಸೇವೆ, ದೊಡ್ಡಜ್ಜಿ ಮಾಡಿದ್ದ ಕೋಡುಬಳೆ ಜೊತೆಗೆ ಸೇರಿಕೊಂಡವು. ಹದಿನಾರು ವರ್ಷದ ಫಣೀಶನಿಂದ ಹಿಡಿದು ಎಂಟು ವರ್ಷದ ನಾನೂ ಸೇರಿದಂತೆ ಎಂಟು ಮಕ್ಕಳ ಪಟಾಲಂ ಕಣದ ಕಡೆಗೆ ಹೊರಟಿತ್ತು. ಒಬ್ಬನ ಕೈಯಲ್ಲಿ ಎವರೆಡಿ ಟಾರ್ಚು, ಒಬ್ಬನ ಕೈಯಲ್ಲಿ ಉದ್ದನೆಯ ಬೆತ್ತ, ಒಬ್ಬನ ಕೈಯಲ್ಲಿ ತಿಂಡಿಯ ಚೀಲ ಹೀಗೆ ಸಕಲ ಸನ್ನದ್ಧರಾಗಿ ನಡೆದೆವು.

"ಏಯ್ ಮೀಸೆ ಮುನಿಸ್ವಾಮಿ ಬೀಮನ ಪಾರ್ಟು ಸಕ್ಕತ್ತಾಗಿ ಮಾಡ್ತಾನೆ ಕಣ್ರೋ, ಹೋದ ಬೇಸಿಗೆ ರಜಾದಲ್ಲಿ ಬಂದಿದ್ದಾಗ ಇದೇ ನಾಟಕನಾ ಗೆಜ್ಜಗದ ಹಳ್ಳೀಲಿ ಆಡಿದ್ರು. ನಾನು ತಾತನ ಜೊತೆ ಯಾವುದೋ ಹೊಸ ಮನೆ ಪುಣ್ಯಾಹಕ್ಕೆ ಅಂತ ಹೋಗಿದ್ದಾಗ, ಹೊತ್ತಾಗೋಯ್ತು ಅಂತ ಅಲ್ಲೇ ಉಳ್ಕೊಂಡಿದ್ವಿ, ಆವತ್ತು ಈ ನಾಟ್ಕಾ ಇತ್ತು".

"ಹೌದಾ, ಮತ್ತೆ ಇವತ್ತು ಮಧ್ಯಾಹ್ನ ನಮ್ಮನೇಗೆ ಬಂದಾಗ ಒಳ್ಳೆ ಇಲಿಮರಿ ತರ ಕೂತಿದ್ದ. ಅಂತೋನು ಬೀಮನ ಪಾರ್ಟು ಮಾಡ್ತಾನೆ ಅಂದ್ರೆ ಆಶ್ಚರ್ಯ ಆಗುತ್ತಪ್ಪ".

"ಎದುರಿಗೆ ಗೋವಿಂದಮ್ಮ ಇದ್ರೆ ಅವನು ಇಲಿಮರೀನೆ ಬಿಡು. ಪಾಪ ಅವನು ತುಂಬಾನೇ ಒಳ್ಳೆ ಮನುಷ್ಯ, ಆ ಗೋವಿಂದಮ್ಮಾನೇ ಜಗಳಗಂಟಿ. ಊರೆಲ್ಲಾ ಇವನನ ಮೇಲೆ ಚಾಡಿ ಹೇಳ್ಕೊಂಡು, ಬೈಕೊಂಡು ಬರ್ತಾಳೆ".

ಮುಂದಿನ ಪುಟ ನೋಡಿ ...

ಮುನಿಸ್ವಾಮಿ ಬಗ್ಗೆ ಪಾಪ ಅನ್ನುಸ್ತು. ಅಷ್ಟು ಸಾಧು ಮನುಷ್ಯ ಬೀಮನ ಪಾತ್ರ ಹೇಗೆ ಮಾಡ್ತಾನೆ ನೋಡಬೇಕು ಅನ್ನೋ ಕುತೂಹಲ ಹೆಚ್ಚಾಯ್ತು.

"ಅದೂ ಮುನಿಸ್ವಾಮಿ ಸ್ಟಾರ್ಟಿಂಗ್ ಸೀನ್ ನಲ್ಲೇ ಬರಲ್ಲ ಕಣ್ರೋ, ಗದೆ ಹಿಡ್ಕೊಂಡು, ಮೀಸೆ ತಿರುವಿಕೊಂಡು, ಹಾಡು ಹೇಳ್ತಾ ಬರ್ತಾನೆ, ಆಗ ನೋಡ್ಬೇಕು ಇಡೀ ಸ್ಟೇಜೇ ನಡುಗುತ್ತೆ".

ಈ ಮಾತು ಕೇಳಿದ ಮೇಲೆ ನನಗೊಂದು ಯೋಚ್ನೆ ಶುರು ಆಯ್ತು. ನಾಟಕ ಶುರು ಆಗೋದು ಎಷ್ಟು ಹೊತ್ತಾಗುತ್ತೋ ಏನೋ, ಅದರ ಮೇಲೆ ಬೀಮ ಬರೋದು ಇನ್ಯಾವಾಗ್ಲೋ ಏನೋ, ಅಷ್ಟರಲ್ಲಿ ನಂಗೆ ನಿದ್ದೆ ಬಂದುಬಿಟ್ರೆ?

ಹೋದಸಲ ನಾಟಕ ನೋಡಿದ್ದೆ ಅಂದ ಪ್ರಕಾಶೀನ ಕೇಳ್ದೆ " ಅಲ್ಲ ನಂಗೆ ನಿದ್ದೆ ಬಂದ್ರೆ ಏನು ಮಾಡೋದು, ನಿನ್ನ ಪಕ್ಕಾನೆ ಕೂತಿರ್ತೀನಿ ಎಬ್ಬಿಸ್ತೀಯಾ ನನ್ನ".

"ಅಷ್ಟೇ ತಾನೆ, ಅದಕ್ಕೊಂದು ಪ್ಲಾನ್ ಹೇಳ್ತೀನಿ ಕೇಳು, ನಿನಗೆ ತೂಕಡಿಕೆ ಬಂದ ಹಾಗೆಲ್ಲ ಕಣ್ಣುಗಳನ್ನ ಒದ್ದೆ ಮಾಡ್ಕೋ, ನಿದ್ದೆ ಹೋಗುತ್ತೆ".

ಮಾತಾಡ್ತಾ ಮಾತಾಡ್ತಾ ಕಣದ ಬಯಲಿಗೆ ಬಂದೇ ಬಿಟ್ವಿ.. ಜಗ ಮಗಿಸುವ ದೀಪಗಳಿಂದ ಇಡೀ ಬಯಲು ಹಗಲಿನ ಹಾಗೆ ಕಾಣುತ್ತಿತ್ತು. ನಾಟಕ ಆಡೊ ಜಾಗಕ್ಕೆ ಮಾತ್ರ ಪೇಟೆಯಿಂದ ಎರವಲು ತಂದಿದ್ದ ಜನರೇಟರ್ ನಿಂದ ದೊರಕುತ್ತಿದ್ದ ಎಲೆಕ್ಟ್ರಿಕ್ ದೀಪಗಳು, ಮತ್ತೆ ಬಯಲಿನ ಸುತ್ತಲೂ ಅಂಗಡಿಗಳಿಟ್ಟುಕೊಂಡವರ ಪೆಟ್ರೋಮ್ಯಾಕ್ಸ್ ದೀಪದ ಬೆಳಕು. ಅಷ್ಟೇ ಅಲ್ಲದೆ ಸುತ್ತ ಮುತ್ತಲಿನ ಹಳ್ಳಿಗಳಿಂದ ಗಾಡಿಗಳಲ್ಲಿ ಬಂದವರು ಇಡೀ ಊರನ್ನೇ ತಮ್ಮೊಡನೆ ತಂದಂತೆ ತಮ್ಮದೇ ಸಾಮ್ರಾಜ್ಯಗಳನ್ನು ಸ್ಥಾಪಿಸಿಕೊಂಡಿದ್ದರು.

ನಾಟಕದ ಮೇಷ್ಟ್ರರೆಂದರೆ ಊರಿನ ಶ್ಯಾನುಭೋಗರ ಮಗ ವಾಸುದೇವ. ಅವರ ತಮ್ಮ ಶ್ರೀನಿಧಿ ನನ್ನ ಓರಗೆಯವನು, ಜೊತೆಗೆ ಎದುರು ಮನೆ ರಾಘವ ಸೇರಿ ನಾವು ಮೂವರೂ ಸಮಯ ಸಿಕ್ಕಾಗಲೆಲ್ಲಾ ಒಟ್ಟಿಗೆ ಆಡುತ್ತಿದ್ದೆವು. ಅವರಿಬ್ಬರ ಜೊತೆ ಹೋಗಿ ಮುಂದೆ ಕೂಡುತ್ತೇನೆಂದರೆ ಫಣೀಶ, ಪ್ರಕಾಶಿ ಯಾರೂ ಬಿಡಲಿಲ್ಲ.

ಸರಿ ಎಲ್ಲರೂ ಒಂದೆಡೆ ಜಮಖಾನ ಹಾಸಿ ಕುಳಿತುಕೊಂಡೆವು.

"ಯಾರಾದ್ರೂ ಅವಸರ ಇರೋರೂ ಹೋಗಿ ಬರೋ ಹಾಗಿದ್ರೆ ಬೇಗ ಹೋಗಿ ಬನ್ನಿ, ಆ ಮೇಲೆ ಜನ ಜಾಸ್ತಿ ಆದ್ರೆ ಎದ್ದು ಹೋಗೋದು ಕಷ್ಟ ಆಗುತ್ತೆ".

ನನಗೆ ಅವಸರವೇನೋ ಆಗಿತ್ತು, ಆದರೆ ಬೇರೆ ಯಾರೂ ಮನಸ್ಸು ಮಾಡದೆ ಇದ್ದುದರಿಂದ ನನ್ನೊಬ್ಬನಿಗೇ ಎದ್ದು ಹೋಗಲು ಸಂಕೋಚವಾಗಿ ಕುಳಿತೇ ಇದ್ದೆ. ಕಡೆಗೆ ನನ್ನ ಪರಿಸ್ಥಿತಿ ಅರ್ಥವಾಗಿ ನನಗಿಂತ ದೊಡ್ಡವನಾದ ವೆಂಕಟೇಶ ನನ್ನೊಡನೆ ಬಂದ. ಜನಗಳಿಂದ ದೂರ ಯಾರಿಗೂ ಕಾಣದಂತೆ ಹೋಗಬೇಕೆಂದರೆ ಅಲ್ಲಿದ್ದ ಕುಂಟೆಯೊಂದನ್ನು ದಾಟಿ ನೀರು ಹರಿಯುತ್ತಿದ್ದ ಹಳ್ಳದ ಪಕ್ಕ ಬೆಳೆದಿದ್ದ ಮರಗಳ ಮರೆಗೆ ಹೋಗಬೇಕಿತ್ತು. ಗವ್ವೆನ್ನುವ ಕತ್ತಲು, ಕುಂಟೆಯಲ್ಲಿ ವಟಗುಟ್ಟುವ ಕಪ್ಪೆಗಳು, ಹಾದಿಯ ಬದಿಯಲ್ಲಿದ್ದ ಕಳ್ಳಿ ಗಿಡದಲ್ಲಿ ಜೊಂಪೆ ಜೊಂಪೆಯಾಗಿ ಮಿಣುಕು ಹುಳಗಳು, ಸರಸರ ಸದ್ದಾದರೆ ಹಾವು ಬಂದಿತೇನೋ ಎನ್ನುವ ಭಯ,ವೆಂಕಟೇಶ ಜೊತೆಗಿದ್ದರೂ ನನಗೆ ಕತ್ತೆತ್ತಿ ನೋಡಲೂ ಭಯ. ಅಂತೂ ಇಂತೂ ಕಣ್ಣು ಮುಚ್ಚಿಕೊಂಡೇ ಸಿಕ್ಕ ಕಡೆ ಅವಸರದ ಕೆಲಸ ಮುಗಿಸಿಕೊಂಡೆ. ಬೀಮನ ಪಾತ್ರಧಾರಿ ಮೀಸೆ ಮುನಿಸ್ವಾಮಿಯ ರಂಗಪ್ರವೇಶವಾಗಿಬಿಡುತ್ತದೇನೋ ಎನ್ನುವ ಆತುರದಲ್ಲೇ ಕಣದ ಕಡೆ ಇಬ್ಬರೂ ಓಡಿದೆವು.

ಅದೆಷ್ಟನೆಯ ಬಾರಿಗೋ ನಾಟಕದ ಮೇಷ್ಟ್ರು ವಾಸುದೇವ "ಬಂಧುಗಳೇ ಇನ್ನು ಕೆಲವೇ ನಿಮಿಷಗಳಲ್ಲಿ ಆರಂಭವಾಗಲಿದೆ ಶ್ರೀ ಚೆನ್ನಕೇಶವ ಮಿತ್ರಮಂಡಲಿ ಅರ್ಪಿಸುವ ನಾಟಕ ಕುರುಕ್ಷೇತ್ರ....." ಎಂದೆಲ್ಲಾ ಹೇಳುತ್ತ ನಾಟಕದ ಪಾತ್ರಧಾರಿಗಳ ಪರಿಚಯ ಮಾಡಿಕೊಡುತ್ತಿದ್ದ. ಅದರಲ್ಲಿ ನನ್ನ ತಲೆಗೆ ಹೋಗುತ್ತಿದ್ದುದು ಬೀಮನ ಪಾತ್ರಧಾರಿಯ ವಿವರ ಮಾತ್ರ.

ತೂಕಡಿಕೆ ಬರುವ ಹಾಗಾಯಿತು. ಸರಿ ಕಣ್ಣನ್ನು ಒದ್ದೆ ಮಾಡಿಕೊಳ್ಳುವ ಸಮಯವಾಯ್ತು ಎಂದುಕೊಂಡೆ. ಆಗ ಸಮಸ್ಯೆ ಎದುರಾಯಿತು, ಕಣ್ಣು ಒದ್ದೆ ಮಾಡಿಕೊಳ್ಳಲು ಬೇಕಾದ ನೀರೆಲ್ಲಿದೆ?.

ನೀರು ಬೇಕೆಂದರೆ ಹತ್ತಿರವಿರುವುದು ಕುಂಟೆ, ಆಥವಾ ರಸ್ತೆಯಾಚೆಗಿರುವ ದೊಡ್ಡ ಕೆರೆ. ಕೇವಲ ಕಣ್ಣೊರೆಸಿಕೊಳ್ಳುವ ನೀರಿಗಾಗಿ ಕುಂಟೆ ಅಥವಾ ಕೆರೆಯೊಳಗಿಳಿದು ಪ್ರಾಣ ಕಳೆದುಕೊಳ್ಳುವಷ್ಟು ಮೂರ್ಖ ನಾನಲ್ಲ. ಆದರೆ ನಾಟಕ ತಪ್ಪಿಸಿ ನಿದ್ದೆ ಮಾಡುವ ಹಾಗೂ ಇಲ್ಲ, ಒಳ್ಳೆ ತಾಪತ್ರಯವಾಯಿತಲ್ಲ.

ಬದಿಯಲ್ಲಿದ್ದ ಪ್ರಕಾಶಿಯ ತಮ್ಮ ವಿಜಯನನ್ನು ಕೇಳಿದೆ " ನಿದ್ದೆ ಬರ್ತಿದೆಯಲ್ಲ ಏನೋ ಮಾಡೋದು?".

"ಕಣ್ಣೊರೆಸಿಕೋ, ಪ್ರಕಾಶಿ ಆಗ್ಲೆ ಹೇಳಲಿಲ್ವಾ", ಅವನೆಂದ.

"ನೀರೆಲ್ಲಿದೆ?",

"ನೀರ್ ಯಾಕಮ್ಮಾ ಬೇಕು",

"ಮತ್ತೆ ಇನ್ನು ಹೇಗೆ",

"ನಾನು ಆಗ್ಲಿಂದ ಮಾಡ್ತಿಲ್ವಾ, ಬಾಯಲ್ಲಿಂದ ಚೆನ್ನಾಗಿ ಎಂಜಲು ತಗೋ, ಅದನ್ನೇ ಕಣ್ಣಿಗೆ ಹಚ್ಕೋ".

ಮುಂದಿನ ಪುಟ ನೋಡಿ ...

"ಎಂಜಲಾ ಥೂ, ಅಸಹ್ಯ".

"ಸರಿ ನಿನ್ನಿಷ್ಟ, ನಿದ್ದೇನೆ ಮಾಡು".

ಕಣ್ಣು ಒರೆಸಿಕೊಳ್ಳುವ ಯೋಚನೆ ಅಲ್ಲಿಗೇ ಬಿಟ್ಟೆ.

ನಾಟಕದ ಸಮಯ ಹತ್ತಿರವಾದಂತೆ ತೂಕಡಿಕೇನೂ ಹೆಚ್ಚಾಯ್ತು. ನಿದ್ದೆ ತಪ್ಪಿಸಕ್ಕೆ ರೆಪ್ಪೆಗಳನ್ನ ಕೈಗಳಲ್ಲಿ ಅಗಲಿಸಿಕೊಂಡು ಬೀಮ ಬರ್ತನೇನೋ ಅಂತ ಕಾಯ್ತಾನೇ ಇದ್ದೆ. ಬೀಮನ ಬದಲು ತೂಕಡಿಕೆ ಬಂತು.

****

"ಲೋ ಮರಿ ಏಳಪ್ಪಾ", ಯಾರೋ ಎಬ್ಬಿಸುತ್ತಿದ್ದರು. "ಭೀಮ ಬಂದನಾ", ಗಡಬಡಿಸಿ ಎದ್ದೆ. ಎದುರಿಗೆ ತಾತ ನಗುತ್ತಾ ಕುಳಿತಿದ್ದರು.

ನೋಡಿದರೆ ಮನೆಯ ಪಡಸಾಲೆಯಲ್ಲಿ ಮಲಗಿದ್ದೇನೆ. ತಾತ ಸ್ನಾನ, ದೇವರ ಪೂಜೆ ಮುಗಿಸಿ ಶಾಸ್ತ್ರ ಕೇಳಲು ಬರುವವರಿಗಾಗಿ ಅಣಿ ಮಾಡಿಕೊಳ್ಳುತ್ತಿದ್ದಾರೆ. ನಾ ಹೇಗೆ, ಯಾವಾಗ ಮನೆಗೆ ಬಂದೆ ಗೊತ್ತೇ ಆಗಲಿಲ್ಲ. ನಾಟಕಾನೂ ನೋಡಲಿಲ್ಲ, ಅದಕ್ಕಿಂತ ಹೆಚ್ಚಾಗಿ ಬೀಮನ ಪಾತ್ರಾನೂ ನೋಡ್ಲಿಲ್ಲ ಅನ್ನೋ ಬೇಜಾರಲ್ಲಿ ಅಳು ಬಂತು. ತಾತನ ಎದುರಿಗೆ ಅತ್ತರೆ ಬೈತಾರೆ ಅಂತ ಅಜ್ಜಿಯನ್ನ ಹುಡುಕಿಕೊಂಡು ಹೊರಟೆ. ಒಳಗಿನ ಕೋಣೆಯಲ್ಲಿ ಉಳಿದ ಹುಡುಗರೆಲ್ಲರೂ ನಿದ್ದೆ ಹೊಡೆಯುತ್ತಿದ್ದರು. ಅವರಲ್ಲಿ ಯಾರು ಎಷ್ಟು ನಾಟಕ ನೋಡಿದ್ರೋ ಎನ್ನುವ ಸಿಟ್ಟು ಕೂಡ ಬಂತು.

ಮಧ್ಯಾಹ್ನ ಊಟದ ನಂತರ ಅಂಗಳದ ವನಸಂಪಿಗೆ ಮರದ ಕೆಳಗೆ ಕುಳಿತು ನಾನೂ ವಿಜಯ ಅಟ್ಟಗುಳಿ ಮಣೆ ಆಡ್ತಾ ಇದ್ದೆವು. ಹಿಂದಿನ ದಿನದ ರಾತ್ರಿಯಿಡೀ ನಡೆದ ನಾಟಕದ ಪರಿಣಾಮವೋ ಏನೋ, ಊರೆಲ್ಲಾ ನಿದ್ದೆಯಲ್ಲಿದ್ದಂತೆ ನೀರವ ವಾತಾವರಣ. ರಣಗುಡುವ ಬಿಸಿಲು, ಅಲ್ಲೊಮ್ಮೆ ಇಲ್ಲೊಮ್ಮೆ ಕಾಗೆಗಳು ಕೂಗುವ ಸದ್ದು ಅಷ್ಟೆ.

"ಏನೋ ಹೊಗೆ ವಾಸನೆ ಅಲ್ವಾ?", ವಿಜಯನನ್ನು ಕೇಳಿದೆ.

"ಹೌದು, ಅಜ್ಜಿ ಅಡ್ಗೆ ಮನೇಲಿ ಏನೋ ಮಾಡ್ತಿರಬೇಕು, ಒಲೇಲಿ ಸೌದೆ ಸರಿಯಾಗಿ ಹತ್ತಿಲ್ಲ ಅನ್ಸುತ್ತೆ", ವಿಜಯ ಹೇಳಿದ.

ಅಷ್ಟರಲ್ಲಿ ಒಳಗಿನಿಂದ ಅಜ್ಜಿಯೇ ಹೊರಗೆ ಬಂದು "ಎಲ್ಲಾ ಸೇರ್ಕೊಂಡು ಏನ್ರೋ ಕಪಿ ಚೇಷ್ಟೆ ಮಾಡ್ತಾ ಇದ್ದೀರಾ, ಎಲ್ಲಾದ್ರೂ ಬಚ್ಚಲಿನ ತರಗುಗಳಿಗೆ ಬೆಂಕಿ ಇಟ್ಬುಬಿಟ್ರೇನ್ರೋ", ಎಂದು ಕೇಳುವ ಹೊತ್ತಿಗೆ,

"ಅಯ್ಯಯ್ಯೋ ಬೆಂಕಿ ಕಾಣ್ರಪ್ಪೋ ಬೆಂಕಿ. ಗೌಡ್ರ ಹಿತ್ಲನಾಗೆ ಬೆಂಕಿ ಬಿದ್ದದೆ ಬನ್ರಪ್ಪೋ..."

ಹೊರಗಿನಿಂದ ಜೋರಾದ ಕೂಗು ಕೇಳಿಸಿತು. ಎಲ್ಲರೂ ಒಂದೇ ಉಸಿರಿಗೆ ಹಿಂದಿನ ಬೀದಿಗೆ ಓಡಿದೆವು. ನಮ್ಮ ಮನೆಯ ಪಕ್ಕದಲ್ಲೇ ನಮ್ಮದೇ ಆದ ಒಂದು ದೊಡ್ಡ ಹೂವಿನ ಹಿತ್ತಲು, ಅದರ ಪಕ್ಕದಲ್ಲಿ ಎತ್ತಿನ ಗಾಡಿಗಳು ಸಾಗುವಷ್ಟು ಅಗಲದ ಒಂದು ದಾರಿ, ಅದಾದ ಮೇಲೆ ಪಟೇಲರ ಹಿತ್ಲು. ಸಾಧಾರಣವಾಗಿ ಹಿತ್ತಲೆಂದರೆ, ಹೂವಿನ ಗಿಡಗಳು, ಹುಲ್ಲಿನ ವಾಮೆ(ಬಣವೆ), ಜೋಳದ ಕಡ್ಡಿಗಳ ರಾಶಿ, ಒಲೆ ಉರುವಲಿಗೆ ಬೇಕಾದ ಸೌದೆ, ಕಬ್ಬಿನ ಪಿಪ್ಪೆ, ತೆಂಗಿನ ಮರದ ಒಣಗಿದ ಗರಿಗಳು, ಕಾಯಿ ಸುಲಿದ ನಾರು, ಎಲ್ಲವನ್ನೂ ಜೋಪಾನವಾಗಿ ಶೇಖರಿಸಿಡುತ್ತಿದ್ದರು. ಮತ್ತು ಗೊಬ್ಬರ ಮಾಡಲು ಮನೆಯ ಸಕಲ ತ್ಯಾಜ್ಯ ವಸ್ತುಗಳನ್ನೂ ಹಾಕುತ್ತಿದ್ದ ಕಸದ ತಿಪ್ಪೆ. ಹೀಗಾಗಿ ಒಂದು ಹಿತ್ತಲಿನಲ್ಲಿ ಅಗ್ನಿದೇವನು ತಾಂಡವ ನೃತ್ಯವನ್ನಾಡಿ ಆಹುತಿ ತೆಗೆದುಕೊಳ್ಳಲು ಸಾಕಷ್ಟು ಆಹಾರವೇ ಇರುತ್ತಿತ್ತು. ಆ ಉರಿ ಬೇಸಿಗೆಯಲ್ಲಿ ಕಿಡಿಗಳು ಹಾರಿ ಸಾಲು ಸಾಲಾಗಿ ಹಿತ್ತಲುಗಳನ್ನು, ಅವಕ್ಕೆ ಅಂಟಿಕೊಂಡಂತಿದ್ದ ಮನೆಗಳನ್ನೂ ದಹನ ಮಾಡುವ ಅವಕಾಶ ಸಾಕಷ್ಟಿತ್ತು.

ನೋಡುನೋಡುತ್ತಿದ್ದಂತೆಯೇ ಜನರ ಹಿಂಡೇ ಅಲ್ಲಿ ಸೇರಿತು. ಹಲವರು ಮನೆಗಳಿಂದ ಕೊಡಗಳನ್ನು ತಂದರು, ಹಗ್ಗಗಳೂ ಬಂದವು. ಗುಂಪು ಗುಂಪಾಗಿ ಜನ ತಮಗೆ ತೋಚಿದ ಬಾವಿಗಳ ಕಡೆ ಓಡಿದರು. ಎಲ್ಲಕ್ಕಿಂತ ಹತ್ತಿರದಲ್ಲಿದ್ದ ಬಾವಿಯೆಂದರೆ ದೊಡ್ಡ ಕೆಂಪಣ್ಣನದು. ಹೊಸದಾಗಿ ತೋಡಿಸಿದ ಬಾವಿ, ಚೆನ್ನಾಗೇ ನೀರು ಬಂದಿತ್ತು. ಅವರ ಮನೆಯವರ ಹೊರತಾಗಿ ಬೇರೆಯವರನ್ನ ಬಾವಿಯ ಹತ್ತಿರ ಸುಳಿಯಗೊಡುತ್ತಿರಲಿಲ್ಲ. ಮೂರ್ನಾಲ್ಕು ಜನ ಕೊಡ ಹಗ್ಗಗಳನ್ನ ತೆಗೆದುಕೊಂಡು ಹೋದಾಗ, ಬಾವಿಯ ಕಟ್ಟೆಗೆ ಒರಗಿ ನಿಂತಿದ್ದ ಕೆಂಪಣ್ಣನ ಮಗಳು ಪಾರ್ವತಮ್ಮ "ಅಯ್ಯೋ ನಮ್ಮ ಬಾವಿನಲ್ಲಿ ನಮಗೇ ಸಾಕಷ್ಟು ನೀರಿಲ್ಲ, ಇನ್ನು ಆ ಬೆಂಕಿ ಆರ್ಸಾಕೆ ಎಲ್ಲಿ ಸಾಕಾಗುತ್ತೆ" ಎಂದು ವಯ್ಯಾರವಾಗಿ ನುಡಿದಳು. ಪಕ್ಕದಲ್ಲೇ ಇದ್ದ ಅವರಮ್ಮ " ಅದ್ಯಾಕಮ್ಮಿ ಅಂಗತೀಯ, ನಾಲಕ್ಕೊಡ ಇಡ್ಕಂಡ್ ಓಗ್ರಣ್ಣ, ಎಚ್ಚೆ ಬೇಡ, ಯಾಕಂದ್ರೆ ನಾಳೆ ನಮ್ಮಳಿಯಂದ್ರಿಗೆ ಎಣ್ಣೆ ಒತ್ತಿ ನೀರಾಕಣಾಂತೀವ್ನಿ. ನೀವು ನಾಲಕ್ಕಲ್ದಿದ್ರೆ ಆರ್ ಕೊಡ ಸೇದ್ಕಳಿ ಪರವಾಗಿಲ್ಲ". ಎಂದು ಉದಾರತನ ತೋರಿದಳು.

ಅಷ್ಟು ಹೊತ್ತಿಗೆ ನಮ್ಮ ಮನೆಯ ಬಾವಿಯೂ ಸೇರಿದಂತೆ ಸುತ್ತಮುತ್ತಲಿನ ಬಾವಿಗಳಿಂದ ಜನ ನೀರು ಹೊತ್ತು ತರಲಾರಂಭಿಸಿದ್ದರು. ನಾವು ಅಜ್ಜಿಯೊಡನೆ ಪಟೇಲರ ಹಿತ್ತಲಿಗೆ ನುಗ್ಗಿದೆವು. ಪಟೇಲರು ಊರಿನ ಭಾರೀ ಕುಳವೇ ಆಗಿದ್ದು ಸಾಕಷ್ಟು ಜಮೀನು, ದನಕರುಗಳು ಎಲ್ಲವೂ ಇತ್ತು. ಹಿತ್ತಲಿನಲ್ಲಿ ಭತ್ತ, ಜೋಳ, ರಾಗಿ, ಕಬ್ಬು ಮುಂತಾದ ಬೆಳೆಗಳ ಒಣ ಪದಾರ್ಥಗಳೊಡನೆ ತೆಂಗು, ಅಡಕೆಯ ಸೋಗೆಗಳೂ ಸೇರಿದಂತೆ, ಬೆಂಕಿಯ ಕಬಳಿಕೆಗೆ ಬೇಕಾದ ಸಾಮಗ್ರಿಗಳು ಯಥೇಚ್ಚವಾಗಿತ್ತು. ಈಗ ಬೆಂಕಿ ಹತ್ತಿದ್ದ ಬಣವೆ ಸುಮಾರು ಹನ್ನೆರಡು ಅಡಿ ಅಗಲ, ಹದಿಂಟಡಿ ಉದ್ದ ಮತ್ತು ನೆಲದಿಂದ ಸುಮಾರು ಎಂಟು ಅಡಿ ಎತ್ತರವಿದ್ದು, ಅಲ್ಲಿದ್ದ ನಾಲ್ಕೈದು ಭಾರೀ ಬಣವೆಗಳಲ್ಲಿ ಇದೂ ಒಂದಾಗಿತ್ತು. ಮುಂದಿನ ಪುಟ ನೋಡಿ ...

ಸಣ್ಣದಾಗಿ ಹೊಗೆಯಾಗಿ ಬಣವೆಯೊಳಗೇ ಆರಂಭವಾಗಿದ್ದ ಬೆಂಕಿ ಈಗ ತನ್ನ ಕೆನ್ನಾಲಿಗೆಯನ್ನು ಹೊರ ಚಾಚಿತ್ತು. ಪರಿಸ್ಥಿತಿ ಕೈ ಮೀರುವ ಮೊದಲೇ ಹತೋಟಿಗೆ ತರಲು ಜನ ಪ್ರಯತ್ನಿಸುತ್ತಿದ್ದರು, ಸಿಕ್ಕ ಸಿಕ್ಕಲ್ಲಿಗೆ ನೀರೆರಚುತ್ತಿದ್ದರು. ಅದು ಬೆಂಕಿಯನ್ನು ನಂದಿಸುವ ಬದಲು ಎಲ್ಲೋ ಬೀಳುತ್ತಿತ್ತು. ಆ ಹೊಗೆಯಲ್ಲಿ, ಆ ಬೆಂಕಿಯ ತಾಪಕ್ಕೆ ಹತ್ತಿರ ಹೋಗಿ ನೀರೆರಚುವ ಮಾತು ದೂರವೇ ಉಳಿದಿತ್ತು.

ಅಷ್ಟು ಹೊತ್ತಿಗೆ ಪಟೇಲರ ಹೆಂಡತಿ ನಾಗಮ್ಮ ಅಲ್ಲಿಗೆ ಬಂದವಳು, ಅಯ್ಯೋ ಶಿವನೆ ಎಂತಾ ಕೆಲ್ಸ ಆಯ್ತಲ್ಲಪ್ಪ, ಯಜಮಾನ್ರು ಬೇರೆ ಊರ್ನಾಗಿಲ್ಲ, ಈ ಎಲ್ಲಾ ಬಣ್ವೆಗ್ಳೂ ಅತ್ಕೊಂಡು ಉರಿದೋದ್ರೆ ದನ ಕರ ಮೇವ್ಗೇನು ಮಾಡೋದು. ಮೇಷ್ಟ್ರೇ, ನೀವೆ ಏನಾರ ಮಾಡಿ ಸ್ವಾಮಿ. ನಾಲ್ಕಾಳುಗಳನ್ನ ಕರ್ದು ಬೆಂಕಿ ಆರ್ಸಾಕಾಯ್ತದಾ ನೋಡಿ, ನಾನು ಅಣಾ ಕೊಡ್ತೀನಿ", ತಾತನ ಮೊರೆ ಹೊಕ್ಕಳು.

ಅಷ್ಟು ಹೊತ್ತಿಗೆ ಬಣವೆಯ ಮೇಲೆ ಯಾರೋ ಹತ್ತಿ ನಿಂತಂತೆ ಕಾಣಿಸಿತು. ಎಲ್ಲರೂ ಗಾಬರಿಯಾಗಿ ನೀರು ಹಾಕುವುದನ್ನೂ ಮರೆತು ಅವನನ್ನೇ ನೋಡ ತೊಡಗಿದರು. ಕಣ್ಣಳು ಮಾತ್ರ ಕಾಣುವಂತೆ ಮುಖಕ್ಕೆ ವಸ್ತ್ರವನ್ನು ಸುತ್ತಿಕೊಂಡು,

ಮೇಲಿನಿಂದಲೇ ಆ ವ್ಯಕ್ತಿ ಕೈ ಸನ್ನೆಯಲ್ಲಿ ಜನರಿಗೆ ನೀರಿನ ಕೊಡಗಳನ್ನು ಅವನಿಗೆ ಕೊಡುವಂತೆ ಕೇಳತೊಡಗಿದ.

"ಯೋಯ್ ಬುದ್ದಿ ನೆಟ್ಟಗೈತೇನ್ಲಾ ನಿಂಗೆ, ಕೆಳಾಗಿಳಿ ಮೊದ್ಲು. ಪ್ರಾಣ ಕಳ್ಕೋತಿಯ ಅಷ್ಟೆ", ತಿಮ್ಮಯ್ಯ ಕೂಗಿ ಹೇಳಿದ.

" ಬುದ್ದಿ ಯಾರದು ವಸಿ ನೋಡಿ, ಅಲ್ಲ ಅವನು ಯಾರು ಅಂತಾನೆ ತಿಳೀವಲ್ದೆ?", ವೆಂಕಟರಮಣಪ್ಪ ಹೇಳಿದ.

ಕದಿರನಿಗೆ ಅದ್ಯಾರೆಂದು ತಿಳಿದು ಒಂದೇ ಉಸಿರಿಗೆ ಅರಚಿದ," ಲೇ ಅವನು ನಮ್ಮ ಮುನ್ಸಾಮಿ ಕಾಣ್ರೋ, ಯಾಕ್ಲಾ ಮುನ್ಸಾಮಿ ಯೇನಾಯ್ತಲಾ ನಿಂಗೆ, ಉಲ್ಲು ಓದ್ರೆ ಓಯ್ತದೆ, ನೀನ್ಯಾಕ್ಲ ಪ್ರಾಣ ಬೀಡ್ತೀಯಾ ಬಾರ್ಲಾ ಕೆಳೀಕೆ".

ವಿಷಯ ತಿಳಿದ ಗೋವಿಂದಮ್ಮ, ಲಬೊ ಲಬೊ ಬಾಯಿ ಬಡಿದುಕೊಳ್ಳುತ್ತಾ, "ಯಾಕ್ಲಾ ನನ್ ಬಿಟ್ಟು ಓಗಬೇಕೂಂತ ಮಾಡಿದಿಯೇನ, ಬ್ಯಾಡ ಕಣೋ, ಇದೊಂದಪ ಕೆಳ್ಗಿಳ್ದು ಬಾ, ಬ್ಯಾಕಾದ್ರೆ ಬ್ಯಾರೆ ಯಾರಾದ್ರು ಮೇಲೋಗ್ಲಿ, ನೀನ್ಮಾತ್ರ ಬ್ಯಾಡಾ, ನಂಗ್ ನಿನ್ ಬಿಟ್ ಬ್ಯಾರೆ ಯಾರವ್ರೆ ಯೇಳು", ಎನ್ನುತ್ತಾ ಜೋರಾಗಿ ರೋಧಿಸತೊಡಗಿದಳು.

ಮುನಿಸ್ವಾಮಿ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ಜನಕ್ಕೆ ಅವನನ್ನು ಕೆಳಗಿಳಿಸುವುದೋ ಅಥವಾ ಹೆಚ್ಚಾಗುತ್ತಿದ್ದ ಉರಿಗೆ ನೀರು ಸುರಿಯುವುದೋ ತಿಳಿಯದೆ ಕಂಗಾಲಾಗಿದ್ದರು. ಅವನು ಮಾತ್ರ ಮೇಲೆಯೇ ನಿಂತು ಅವರಿವರು ಕೊಟ್ಟ ನೀರನ್ನು ಸರಿಯಾಗಿ ಬೆಂಕಿಯಿರುವ ಕಡೆ ಸುರಿಯುತ್ತಿದ್ದ.

ಇದ್ದಕ್ಕಿದ್ದಂತೆ ಗೋವಿಂದಮ್ಮ ಅಲ್ಲಿಯೇ ಇದ್ದ ಇಚ್ಚಣಿಗೆಯೊಂದನ್ನು ಅದೇ ಬಣವೆಯ ಹಿಂಬಾಗಕ್ಕೆ ಒರಗಿಸಿ, ಎರಡು ಮೂರು ಮೆಟ್ಟಿಲನ್ನೇರಿ "ಲೇ ಕದ್ರಾ ತತ್ತಾರ್ಲಾ ಇತ್ತ ಆ ಕೊಡನಾ, ನಾ ಮೇಲಕ್ಕೆ ಕೊಡ್ತೀನಿ, ತನ್ರಾ ಬೇಗ ಬೇಗ, ನೋಡ್ತಾ ನಿಂತ್ರ ಕೆಲ್ಸ ಆಗಾಕಿಲ್ಲ" ಎಂದು ಜೋರಾಗಿ ಕೂಗು ಹಾಕಿದಳು.

ಜನರಿಗೆ ಹೊಸ ಹುರುಪು ಬಂದಂತಾಯ್ತು. ತಿಮ್ಮಯ್ಯ, ವಸೂರ, ಗೋವಿಂದ, ಆಂಜಿನಪ್ಪ, ಎಲ್ಲಮ್ಮ, ನರಸಮ್ಮ, ಸಾವಂತ್ರಿ, ನಾವುಗಳು, ಕಡೆಗೆ ಅಜ್ಜಿ ಕೂಡ ಕೈ ಕೊಟ್ಟು, ಬಾವಿಗಳಿಂದ ನೀರನ್ನು ಕದಿರ, ಗೋವಿಂದಮ್ಮನ ಕೈಗೆ ಸಾಗಿಸತೊಡಗಿದೆವು. ಅವರಿಬ್ಬರೂ ಇಚ್ಚಣಿಗೆಯ ಮೆಟ್ಟಿಲುಗಳ ಮೇಲೆ ನಿಂತು ಮುನಿಸ್ವಾಮಿಯ ಕೈಗೆ ಕೊಡುತ್ತಿದ್ದರು. ಅವನು ಕಷ್ಟಪಡುತ್ತಲೇ ಸರಿಯಾದ ಜಾಗ ನೋಡಿಕೊಂಡು ನೀರನ್ನು ಸುರಿಯುತ್ತಿದ್ದ. ಈಗ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನೂ ಹಲವರು ಮುನಿಸ್ವಾಮಿಯ ಜೊತೆಗೆ ಕೆಳಗಿನಿಂದಲೇ ಕೈಗೂಡಿಸಿದರು. ಬೆಂಕಿಯ ಆರ್ಭಟ ಕಡಿಮೆಯಾಗುತ್ತಾ ಬಂದಿತು. ಬಣವೆ ಅರ್ಧಭಾಗ ಉರಿದು ನಿಂತಿತ್ತು. ಆದರೆ ಮುನಿಸ್ವಾಮಿಯ ಪರಿಸ್ಥಿತಿ ಹದಗೆಡುತ್ತಿತ್ತು..

ಹಿಂದಿನ ದಿನ ರಾತ್ರಿ ನೋಡಲಾಗದ ಭೀಮನ ಪಾತ್ರಕ್ಕಿಂತಲೂ ಹೆಚ್ಚಿನ ಪೌರುಷಮಯವಾದ ಮುನಿಸ್ವಾಮಿಯ ನಿಜರೂಪ ಎಲ್ಲರಿಗೂ ಅಲ್ಲಿ ಕಂಡಿತ್ತು.

ಕದಿರ ಮೇಲೆ ಹತ್ತಿ ಮುನಿಸ್ವಾಮಿಗೆ ಕೆಳಗಿಳಿಯಲು ಸೂಚಿಸಿ, ಅವನು ಸಂಪೂರ್ಣ ನಿತ್ರಾಣನಾಗಿ ಕುಸಿದಾಗ, ತಾನೇ ಹೆಗಲಿಗೆ ಕೈಕೊಟ್ಟು ಹುಲ್ಲಿನ ಮೇಲಿನಿಂದ ಮೆಲ್ಲನೆ ಕೆಳಕ್ಕೆ ಜಾರಿಸಿದ.

ಗೋವಿಂದಮ್ಮ ಅವನ ಕೈಗಳನ್ನು ತನ್ನ ಭುಜದ ಮೇಲಿರಿಸಿಕೊಂಡು ಮೆಲ್ಲನೆ ಪಕ್ಕದಲ್ಲಿದ್ದ ಹತ್ತಿಯ ಮರದ ಕೆಳಕ್ಕೆ ಕರೆದುಕೊಂಡು ಹೋಗಿ ತನ್ನ ತೊಡೆಯ ಮೇಲೆ ಅವನ ತಲೆಯನ್ನಿರಿಸಿಕೊಂಡು ಮಲಗಿಸಿಕೊಂಡಳು. ಅಜ್ಜಿ ಕೊಟ್ಟ ತಂಬಿಗೆಯ ನೀರಿನಲ್ಲಿ ತನ್ನ ಸೆರಗನ್ನದ್ದಿ ಮುನಿಸ್ವಾಮಿಯ ಮುಖವನ್ನು ಅಕ್ಕರೆಯಿಂದ ಒರಸುತ್ತಾ ಹೇಳಿದಳು,

"ನೋಡ್ದಾ ಅಮ್ಮಣ್ಣೋರೆ ನನ್ ಗಂಡನ್ ಪೌರ್ಸಾನ, ಈವತ್ ಊರ್ನಾಗ್ ಗಂಡ್ಸಂದ್ರೆ ಮುನ್ಸಾಮೀನೆ ಅಂತ ತೋರುಸ್ಬುಟ್ಟ. ನಂಗೊತ್ತಿತ್ತು ಅಮ್ಮಣ್ಣೋರೆ ಈವಯ್ಯ ಎಂತೋನು ಅಂತ. ಇವನೇನಾದ್ರು ಮ್ಯಾಗೆ ಅತ್ತಿರ್ಲಿಲ್ಲಾಂದ್ರೆ ಊರ್ಗೂರೆ ಅತ್ಕೊಂಡೋಗಿರೋದು. ಅಮ್ಮಣ್ಣಿ ಈವತ್ತು ಆ ಕಾಲ್ವೆ ಬದೀನಾಗಿರೋ ಮುನೇಸ್ವರನ್ ತಾವ ಅರ್ಕೆ ಒತ್ಕೊಂಡ್ ಕೇಳ್ಕತೀನಿ ನೋಡು, ಇನ್ ಏಳೇಳ್ ಜನುಮ್ದಾಗೂನು ಈ ಮುನ್ಸಾಮೀನೆ ನನ್ಗಂಡನನ್ನಾಗ್ ಮಾಡು ಅಂತ".

ಮುನಿಸ್ವಾಮಿಯ ಮುಖದಲ್ಲಿ ಇಷ್ಟು ಹೊತ್ತೂ ಇಲ್ಲದಿದ್ದ ನೋವು ಈಗ ಕಾಣಿಸಿದ ಹಾಗಿತ್ತು. ▪

ವಿಷ

ಕನಕಾಪುರ ನಾರಾಯಣ

ಜಲಜ ತನ್ನ ಮದುವೆಯಾದಾಗ್ಗಿನಿಂದ ತನ್ನ ಅತ್ತೆಯ ಜೊತೆ ಹೊಂದಿಕೊಳ್ಳಲುಸಾಧ್ಯವಾಗಲಿಲ್ಲ. ಏನಾದರೊಂದು ಕಾರಣ ಹುಡುಕಿ ಇಬ್ಬರೂ ಕಚ್ಚಾಡುವುದು, ಒಬ್ಬರನ್ನೊಬ್ಬರು ಶಪಿಸುವುದು ಸಾಮಾನ್ಯವಾಗಿಬಿಟ್ಟಿತ್ತು. ಅತ್ತೆ ಸೊಸೆಯರ ಜಗಳ ದಿನೇದಿನೇ ಬೆಳೆಯುತ್ತಾ ಜಲಜಳಿಗೆ ಒಮ್ಮೆ ರೋಸಿಹೋಗಿ ಒಬ್ಬ ಪಂಡಿತನ ಬಳಿಗೆ ಹೋಗಿ ತನ್ನ ಕಷ್ಟವನ್ನು ಹೇಳಿಕೊಂಡು ಹಣ ಎಷ್ಟಾದರೂ ಸರಿ ಹೇಗಾದರೂ ಮಾಡಿ ತನ್ನ ಅತ್ತೆಗೆ ವಿಷ ಕುಡಿಸಿಯಾದರೂ ಕೊಲ್ಲುವ ಸಲಹೆ ಕೇಳಿದಳು. ವಿಚಾರವನ್ನು ನಿಧಾನವಾಗಿ ಪರಿಶೀಲಿಸಿದ ನಂತರ ಪಂಡಿತ "ಅಮ್ಮಾ ಜಲಜ, ನಾನು ನಿನಗೆ ಒಂದು ಸೀಸೆ ವಿಷವನ್ನು ಕೊಡುತ್ತೇನೆ, ಆದರೆ ನೀನು ಇದನ್ನು ಪ್ರತಿದಿನ ಊಟದಲ್ಲಿ ಬೆರೆಸಿ ಕೊಡು, ನಿನ್ನತ್ತೆ ನಿಧಾನವಾಗಿ ಸಾಯುತ್ತಾಳೆ" ಎಂದ.

ಕೂಡಲೇ ಆ ಸೀಸೆಯನ್ನು ಮನೆಗೆ ತಂದು ಎಂದಿನಂತೆ ಅತ್ತೆಯ ಕೂಡ ಕೋಪ ಮಾಡದೆ ಉಟೋಪಚಾರವನ್ನು ತಾನೇ ಮಾಡತೊಡಗಿದಳು. ಊಟದಲ್ಲಿ ವಿಷವನ್ನು ಮರೆಯದೇ ಬೆರೆಸಿ ಇನ್ನೇನು ಸ್ವಲ್ಪವೇ ಕಾಲ ಬದುಕಿರುವ ಅತ್ತೆಯ ಜೊತೆ ಸಂತೋಷದಿಂದ ಮಾತನಾಡುತ್ತಾ ಹೊಂದಿಕೊಳ್ಳುತ್ತಾ ಬಂದಳು. ಮೊದಮೊದಲು ಕಷ್ಟವೆನಿಸಿದರೂ ಹಾಗೇ ಹೊಂದಿಬಾಳುವುದು ಅಭ್ಯಾಸವಾಗಿ ದಿನಗಳು, ವಾರಗಳು ತಿಂಗಳುಗಳೇ ಕಳೆದವು. ಅತ್ತೆಗೂ ತನ್ನ ತಪ್ಪುಗಳರಿವಾಗಿ ಜಲಜಳನ್ನು ಕ್ಷಮೆಕೇಳಿ ತಾನೂ ಆಕೆಯನ್ನು ಕ್ಷಮಿಸಿ ಸಂತೋಷದಿಂದ ಕಾಲ ಕಳೆದಳು. ಜಲಜಳಿಗೆ ಸಂಕಟವಾಗುತ್ತಾ ಬಂದಿತು. ಇಷ್ಟೊಂದು ಒಳ್ಳೆಯ ಅತ್ತೆಯನ್ನು ತನ್ನಕೈಯ್ಯಾರೆ ಕೊಲ್ಲುವುದಾದರೂ ಹೇಗೆ" ಒಂದು ದಿನ ಪಂಡಿತನ ಬಳಿ ಓಡಿಬಂದು "ಸ್ವಾಮೀ ಪಂಡಿತರೇ ಹೇಗಾದರೂ ಮಾಡಿ ನನ್ನ ಅತ್ತೆಯನ್ನು ಉಳಿಸಿಕೊಡಿ ಅವರು ಸಾಯುವುದು ನನಗೆ ಇಷ್ಟವಿಲ್ಲ, ದಯೆಮಾಡಿ" ಎಂದು ಗೋಗರೆದಳು. ಅದಕ್ಕೆ ಪಂಡಿತನು "ಅಮ್ಮಾ ಜಲಜ ನೀನೇನೂ ಭಯಪಡಬೇಡ ನಿನ್ನ ಅತ್ತೆಗೆ ಏನೂ ಆಗದು, ನಾನಂದು ಕೊಟ್ಟಿದ್ದು ವಿಷವಲ್ಲ. ನಿನ್ನಲ್ಲಿ ಈ ಬದಲಾವಣೆ ಕಾಣಲೆಂದು ಹಾಗೆ ಮಾಡಿದೆ" ಎಂದನು. ಜಲಜಳ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ತನ್ನೊಳಗಾದ ಬದಲಾವಣೆಯನ್ನು ಉಳಿಸಿಕೊಂಡು ಸಂಸಾರ ನಡೆಸಿದಳು. ▪

ಮೊಳಕೆ ಮೆಂತ್ಯದ ಭಾತ್

ಬೇಕಾಗುವ ಸಾಮಗ್ರಿಗಳು

- ಅಕ್ಕಿ 2ಪಾವು, ಮೊಳಕೆ ಬಂದಿರುವ ಮೆಂತ್ಯ 4 ಚಮಚ, ನಿಂಬೆ ಹಣ್ಣು 1, ಹೆಚ್ಚಿದ ಕ್ಯಾರೆಟ್ 1, ಈರುಳ್ಳಿ 2
- ಹುರಳಿ ಕಾಯಿ 100 ಗ್ರಾಂ, ಹಸಿಮೆಣಸಿನ ಕಾಯಿ 8, ಶುಂಟಿ 2 ಗೋಲಿ ಗಾತ್ರ, ಬೆಳ್ಳುಳ್ಳಿ 1 ಗಡ್ಡೆ
- ಎಣ್ಣೆ 100 ಗ್ರಾಂ, ಕೊತ್ತಂಬರಿ ಸೊಪ್ಪು 1 ಕಂತೆ, ಸಕ್ಕರೆ ಅರ್ಧ ಚಮಚ, ಉಪ್ಪು 1-2 ಚಮಚ

ಮಾಡುವ ವಿಧಾನ

- ಈರುಳ್ಳಿ, ಶುಂಟಿ, ಬೆಳ್ಳುಳ್ಳಿ, ಮೆಣಸಿನಕಾಯಿಯನ್ನು ರುಬ್ಬಿಟ್ಟುಕೊಳ್ಳಿ. ಅಕ್ಕಿಯನ್ನು ತೊಳೆದು ಇಟ್ಟುಕೊಳ್ಳಿ
- ಕುಕ್ಕರಿನಲ್ಲಿ ಎಣ್ಣೆ ಹಾಕಿ ಕಾದನಂತರ ಒಗ್ಗರಣೆ ಹಾಕಿ ರುಬ್ಬಿದ ಮಿಶ್ರಣವನ್ನು ಒಗ್ಗರಣೆಗೆ ಹಾಕಿ ಕೆಂಪಗೆ ಹುರಿಯಿರಿ
- ಮೊಳಕೆ ಬಂದ ಮೆಂತ್ಯವನ್ನು ಅದಕ್ಕೆ ಬಗ್ಗಿಸಿ ಬಾಡಿಸಿ ಒಗ್ಗರಣೆಗೆ ಅಕ್ಕಿ ತರಕಾರಿಗಳನ್ನು ಹಾಕಿ ಸ್ವಲ್ಪ ಹುರಿದು ಎರಡು ಲೋಟ ನೀರು ಹಾಕಿ ಕುಕ್ಕರ್ ಮುಚ್ಚಿಡಿ
- ಕುಕ್ಕರ್ ಒಂದೆರೆಡು ಕೂಗಿದಮೇಲೆ ಒಲೆ ಆರಿಸಿ, ಒತ್ತಡ ಇಳಿದ ಮೇಲೆ ಮುಚ್ಚಳ ತೆಗೆಯಿರಿ. ನಿಂಬೆರಸ, ಕೊತ್ತಂಬರಿ ಸಿಂಪಡಿಸಿ ಬಡಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧. ಮೂರಕ್ಷರದ ಈ ಪದವು ಜಗಳವಾಡುವುದರಲ್ಲೇ ಮರ ಮರ ಸುತ್ತುತ್ತಿದೆ
೨. ಮೊದಲೆರೆಡಕ್ಷರವು ಎಲ್ಲವೂ ಒಂದೇ ಎನ್ನುತ್ತಿದೆ
೩. ಕೊನೆಯೆರಡು ಕೂಡಿದರೆ ಫಲಕೊಡುವ ಪರೋಪಕಾರಿಯಾಗುತ್ತದೆ
೪. ಮೊದಲಿನ ಅಕ್ಷರಕ್ಕೆ ಕೊನೆಯಕ್ಷರ ಸೇರಿಸಿದರೆ ಕುತ್ತಿಗೆಯನ್ನು ಅಲಂಕರಿಸುತ್ತದೆ

ಉತ್ತರಕ್ಕೆ ಪುಟ ೧೬ ನೋಡಿ

ತಾಯ್ನುಡಿ ...

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

ಮನೆಯಲಿ ಕನ್ನಡ
ಮನದಲಿ ಕನ್ನಡ
ಕನ್ನಡ ನೆಲದಲೆ ಹಾಡುವೆನು
ಕನ್ನಡ ನೆಲದಲೆ ಆಡುವೆನು!

ನಾ ಕುಡಿಯುವ ನೀರು ಕಾವೇರಿ
ನಾ ಹಾಡುವ ರಾಗವು ಸಾವೇರಿ!
ಕನ್ನಡವೆಂದರೆ ಹೊನ್ನುಡಿಯು
ಕನ್ನಡವೆಂದರೆ ಮುನ್ನುಡಿಯು!

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

ಗೆಳೆಯರೆ ಬನ್ನಿರಿ ನಲಿಯೋಣ
ಕನ್ನಡ ಪಾಠವ ಕಲಿಯೋಣ
ಕನ್ನಡವನ್ನೆ ನುಡಿಯೋಣ
ಕನ್ನಡ ನಾಡನು ಬೆಳಗೋಣ

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

ಕನ್ನಡದಲೆ ನಾ ಬರೆಯುವೆನು
ಕನ್ನಡ ಗೆಳೆಯರ ಪಡೆಯುವೆನು
ಹಗಲು ಇರುಳು ದುಡಿಯುವೆನು
ಮುಗಿಲನು ಮೀರಿ ಬೆಳೆಯುವೆನು

ಅಮ್ಮ ಕಲಿಸಿದ ಕನ್ನಡ ಬಾಷೆ
ಕನ್ನಡವೆಂದರೆ ನನಗಾಸೆ!

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಕನ್ನಡದ ಖ್ಯಾತ ಹಿರಿಯ ನಿರ್ದೇಶಕರೊಬ್ಬರು ತಮ್ಮ ಚಿತ್ರವೊಂದರ ನಿರ್ದೇಶನದ ನಡುವಿನಲ್ಲಿಯೇ ನಿಧನರಾದರು. ಆ ಚಿತ್ರವನ್ನು ಕೆ ಎಸ್ ಎಲ್ ಸ್ವಾಮಿಯವರು ಪೂರ್ಣಗೊಳಿಸಿದರು. ಆ ಹಿರಿಯ ನಿರ್ದೇಶಕರು ಯಾರು? ಆ ಚಿತ್ರ ಯಾವುದು?

೨. ಕೆ. ಎಸ್. ಎಲ್ ಸ್ವಾಮಿಯವರು ಮತ್ತೊಂದು ಹೆಸರಿನಿಂದಲೂ ಪ್ರಸಿದ್ಧರಾಗಿದ್ದರು, ಆ ಹೆಸರೇನು? ಇವರ ಪತ್ನಿಯೂ ಸಹ ಕನ್ನಡದ ಖ್ಯಾತ ನಟಿ, ಈಕೆ ಯಾರು?

ಸರಿ ಉತ್ತರಕ್ಕೆ ಪುಟ ೨೩ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ಸಮರ ೨. ಸಮ ೩. ಮರ ೪. ಸರ

ಹಾಸ್ಯ ಚಿಲುಮೆ

ಮಗ: ಅಪ್ಪ ನಾನು ಗಾಂಧೀಜಿ ಥರ ಆಗಬೇಕು

ಅಪ್ಪ:ಆಗೂ ಬೇಡ ಅಂದವರ್ಯಾರು

ಮಗ:ಹಾಗಿದ್ರೆ ಅವರು ಹನ್ನೆರಡನೇ ವಯಸ್ಸಿಗೇ ಮದುವೆ ಆದರು.....ನಾನೂ ಆಗುವೆ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಬಯಸಿದ್ದನ್ನೆಲ್ಲಾ ಕೊಡುವ ಮರ.

೨. ಕಣ್ಣು ಕೊಟ್ಟ ದೇವರು.

೩. ಕರ್ನಾಟಕ, ತಮಿಳ್ನಾಡುಗಳ ನಡುವೆ ಆಗಾಗ್ಗೆ ಬಿಸಿಯನ್ನೇರಿಸುವವಳು.

೪. ಎಲ್ಲ ಕಡೆಯಲ್ಲಿಯೂ ನಾನಿದ್ದೇನೆ ಎಂದು ಹೇಳುವ ಈ ಪುಟ್ಟ ಶ್ರಮಜೀವಿ.

೫. ಉರಗದ ಬಾಯಿಗೆ ಸಿಲುಕಿದರೂ ಮತ್ತೆ ಹೋಗಿ ಮೇಲೇರಿ ಗೆಲ್ಲಬೇಕೆಂದು ಆಡುವ ಆಟ.

ಉತ್ತರ: ಎರಡು ಬೆಟ್ಟಗಳ ನಡುವಿನ ಪ್ರದೇಶವನ್ನು ಕ್ರಯಕ್ಕೆ ಕೊಟ್ಟುಬಿಡಿ ಎಂದು ಹೇಳುತ್ತಿದೆ ಈ ಜಲಾಶಯ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ನವೆಂಬರ್ ೩೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಅಕ್ಟೋಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿದ್ನಿ

ಅಕ್ಟೋಬರ್ ತಿಂಗಳ ಪದಪುಂಜದ ಉತ್ತರ

೧. ಲೋಕಮಾತೆಯಾದ ಸೀತೆಗೆ ಆಶ್ರಯ ನೀಡಿದ್ದ ಹುಲ್ಲು ಮತ್ತು ಎಲೆಗಳಿಂದ ನಿರ್ಮಿಸಿದ್ದ ಮನೆ

ಪ	ರ್ಣ	ಕು	ಟಿ

೨. ನನ್ನದಲ್ಲ ಎಂದು ಬಿಡುವ 'ಅರ್ಘ್ಯ' ದಲ್ಲಿ ತುಸು ಬದಲಾವಣೆಯಾದರೆ ಹೆಚ್ಚಿನ ಬೆಲೆಯುಳ್ಳದ್ದಾದೀತು.

ಅ	ರ್ಘ

೩. ಕೋಗಿಲೆ ಹಾಡಲು ಸಾಧುಗಳೊಡನೆ ಬರುವ ಈ ಕಾಲವೇ ಪ್ರಶಸ್ತ.

ವ	ಸಂ	ತ

೪.ದೇವರು ನಿಂತಿರುವ ಸ್ಥಳದಲ್ಲೇ ಅಡಗಿಸಿಟ್ಟಿರುವ ಸಂಪತ್ತೂ ಇದೆ.

ಸ	ನ್ನಿ	ಧಿ

೫. ಸನ್ಯಾಸಿಯಾಗಲು ಪಡೆಯಬೇಕಾದದ್ದು?

ದೀ	ಕ್ಷೆ

ಉತ್ತರ: ವ್ಯಾಕರಣ ಪಂಡಿತರ ಮನೆಯಿರುವ ಸಮನಾದ ಬಣ್ಣದ ಉದ್ದನೆಯ ಓಣಿ ಯಾವುದು?

ಸ	ವ	ರ್ಣ	ದೀ	ರ್ಘ	ಸಂ	ಧಿ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ - ನಾಗಶ್ರೀ ಹರ್ಷ, ಸಿದ್ನಿ

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ಕನ್ನಡದ ಜನರು ಹೊರ ದೇಶಕ್ಕೆ ಹೋಗಿ ನೆಲೆಸುವುದು ತೀರ ಸಾಮಾನ್ಯದ ವಿಷಯವಾಗಿದೆಯಲ್ಲವೇ ? ಆದರೆ ಹಾಗೆ ಹೋದವರು, ವಾಪಸ್ ತಾಯಿನಾಡಿಗೆ ಮರಳುವವರು ಬಹಳ ವಿರಳ. ಹಾಗೆ ಹೋದ ಜನಾಂಗದ ಪೀಳಿಗೆಯು ಬೆಳೆದು ಬಹಳ ದೊಡ್ಡದಾಗಿದೆ. ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮಕ್ಕಳು ಹುಟ್ಟಿ, ಕನ್ನಡನಾಡಿನಿಂದ ಬಹಳ ದೂರವೇ ಉಳಿದು ಬಿಟ್ಟಿದ್ದಾರೆ. ಅಂತಹ ಒಬ್ಬ ಮೊಮ್ಮಗ ಬೆಂಗಳೂರಿಗೆ ಹೋದಾಗ ಏನಾಗಿರಬಹುದು? ನೀವೇ ಓದಿ ನೋಡಿ.

ಅಜ್ಜಿ : ಏನೋ ಬಾಗಿಲು ಬಡಿದ ಸದ್ದು. ಜೊತೆಗೆ knock knock ಅಂತ ಬೇರೆ ಬಾಯಲ್ಲಿ ಹೇಳ್ತಾ ಇದ್ದಾರಲ್ಲ. ಯಾರೀ ನೀವು ಮನೆ ಬಾಗಿಲು ತೆರೆದಿದ್ದಾಗ ಒಳಗೆ ಬರೋದು ಬಿಟ್ಟು ಅಲ್ಲಿ ಏನು ಮಾಡ್ತಾ ಇದ್ದೀರಿ ?

ಮೊಮ್ಮಗ : ಹಲೋ ಅಜ್ಜಿ, thanks for letting me in. ನಾನು ನಿನ್ನ ಗ್ರಾಂಡ್ ಸನ್.

ಅಜ್ಜಿ : ಏ ಕಮಲಾ ನೋಡೇ ಯಾರೋ ಗ್ರಾಂಡ್ ಅಂತೆ ಬಂದಿದ್ದಾರೆ. ನಿನ್ನ ಹೆಸರೇನಪ್ಪಾ ? ಯಾರ ಮಗ ? ನೋಡೋಕೆ ನಮ್ಮೂರಿನ ಹಾಗೆ ಕಾಣೋದೆ ಇಲ್ಲವಲ್ಲಾ...

ಮೊಮ್ಮಗ : ಅಜ್ಜಿ ನಾನು ನಿಮ್ಮ 3rd ಸನ್ ಫ್ಯಾಮಿಲಿ ನವನು, ಹೊರದೇಶದಲ್ಲಿ ನೆಲೆಸಿ ಬಹಳ ವರ್ಷವಾಗಿದೆ, ಈಗ ಭಾರತ ನೋಡೋಕ್ಕೆ ಬಂದೆ.

ಅಜ್ಜಿ : ಹೌದೇ, ನನ್ನ ಮೂರನೇ ಮಗ ಓದೋಕ್ಕೆ ಅಂತ ಫಾರಿನ್ಗೆ ಹೋಗಿದ್ದು, ಆಮೇಲೆ ಅಲ್ಲೇ ಮದುವೆ, ಅಲ್ಲೇ ಮುಂಜಿ, ಅಲ್ಲೇ ಮಕ್ಕಳು ಮೊಮ್ಮಕ್ಕಳು ಆಗಿರಬೇಕು, ಫೋನ್ ಒಂದೊಂದು ಸಲ ಮಾಡ್ತಾ ಇದ್ದ ಆಮೇಲೆ ಅದು ನಿಂತು ಹೋಯಿತು. ಅದು ಬಿಡು, ನಿನಗೆ ಕನ್ನಡ ಮಾತಾಡಕ್ಕೆ ಬರುತ್ತೋ, ಅಥವಾ ಇಂಗ್ಲಿಷ್ ಟಸ್ಸು ಪುಸ್ಸು ಮಾತ್ರಾನೇ ಬರೋದೋ!!!

ಮೊಮ್ಮಗ : ಅಜ್ಜಿ ನಾನು ಏಪೋರ್ಟ್ ಇಂದ ಮನೆ ತನಕ ಎಲ್ಲರ ಹತ್ತಿರ ಬರೀ ಇಂಗ್ಲಿಷ್ನಲ್ಲೆ ಮಾತಾಡ್ದೇ. ಎಲ್ಲರೂ ಚೆನ್ನಾಗಿ ಇಲ್ಲಿ ಇಂಗ್ಲಿಷ್ ಮಾತಾಡುತ್ತಾರೆ, ಯಾಕೆ ನನಗೆ ಕನ್ನಡ ಬರಬೇಕು ಹೇಳು ?

ಅಜ್ಜಿ : ಸ್ವಲ್ಪ ಬೇಸರಗೊಂಡು, ಹೌದು ಮಗು ನಮ್ಮೂರಿನವರೇ ಹೆಚ್ಚಿನ ಜನ ಇಂಗ್ಲಿಷ್ ಇಂಗ್ಲಿಷ್ ಅಂತ ಪರ ಭಾಷೆ ವ್ಯಾಮೋಹಕ್ಕೆ ಬಿದ್ದಿರಬೇಕಾರೆ, ನಾನೇನು ನಿನ್ನ ಪ್ರಶ್ನೆ ಮಾಡುವುದು... ನಿಮಗೆ ಅದು ದಿನ ನಿತ್ಯದ ಆಡುಭಾಷೆ ಅಲ್ಲವೇ.

ಮೊಮ್ಮಗ : ಅಲ್ಲ ಅಜ್ಜಿ ನಮಗೇನೋ ಎಲ್ಲಿ ನೋಡಿದರಲ್ಲಿ ಇಂಗ್ಲಿಷ್ ಮಾತಾಡುವವರೇ ಸಿಕ್ತಾರೆ. ಆದರೆ ಇಲ್ಲಿ ಹಾಗಲ್ಲವಲ್ಲ, ಕನ್ನಡ ಮಾತಾಡುವವರು ಬಹಳಷ್ಟು ಜನ ಇದ್ದಾರೆ. ಆದರೂ ಯಾಕೆ ಇಂಗ್ಲಿಷ್ ಇಂಗ್ಲಿಷ್ ಜಪ ಮಾಡ್ತಾರೆ ಅಂತ ತನಗೆ ಬಂದ ಕನ್ನಡದಲ್ಲೇ ದಬಾಯಿಸಿಬಿಟ್ಟ ಅಜ್ಜಿನ.

ಅಜ್ಜಿ : ಸ್ವಲ್ಪ ಏನೂ ಹೇಳಲು ತೋಚದೆ, ಏನೋಪ್ಪ ಆಫೀಸ್, ಬಿಸಿನೆಸ್ ಮಣ್ಣು ಮಸಿ ಅಂತ ಹೇಳಿಕೊಂಡು ಇಂಗ್ಲಿಷ್ ಇಂಗ್ಲಿಷ್ ಅಂತ ಇರ್ತಾರೆ. ನಮ್ಮ ಕನ್ನಡಕ್ಕೆ ಈ ಸ್ಥಿತಿ ಬರಬಾರದಿತ್ತು. ಮರೆತು ಹೋದರೆ ಎಲ್ಲವೂ ಮರೆಯಾಗಿಬಿಡುತ್ತೆ. ಅದಕ್ಕೆ ನನ್ನ ಕೈಯ್ಯಲ್ಲಿ ಏನಿದೆ ಹೇಳು. ಏನು ಮಾಡಕಾಗತ್ತೆ ನನಗೆ ಈ ವಯಸ್ಸಲ್ಲಿ.

ಮೊಮ್ಮಗ : ಅಜ್ಜಿ ಮಾಡಕ್ಕೆ ಆಗಲ್ಲ ಅಂತ ಏನೂ ಇಲ್ಲ. ಅದಕ್ಕೆ ನಾನು ಇಲ್ಲಿಗೆ ಬಂದಿರುವುದು..

ಅಜ್ಜಿ : ಏನಪ್ಪಾ ಹೇಳಿದೆ, ನೀನು ಅಲ್ಲಿಂದ ಬಂದು ಇಲ್ಲಿ ಕನ್ನಡ ಉಳಿಸುತ್ತೀಯಾ ? ಅದು ಸರಿ ನಿನಗೆ ಕನ್ನಡ ಬರೋದು ಅಷ್ಟಕಷ್ಟೇ, ನೀನು ಹೇಗಪ್ಪಾ...

ಮೊಮ್ಮಗ : ಅಜ್ಜಿ, ನಮ್ಮ ಪೀಳಿಗೆಯವರು ಈಗ ತುಂಬಾ realize ಮಾಡಿಕೊಂಡಿದ್ದಾರೆ. ನಮ್ಮ ತಾಯಿನಾಡಿನ ಭಾಷೆ ಎಷ್ಟು ಮುಖ್ಯ, ಅದು ಮರೆತು ಹೋಗಬಾರದು ಎಂದು. ನಾನು ಹೊರದೇಶದಲ್ಲಿ ಇದ್ದರೂ online ಮೂಲಕ ಕನ್ನಡ ಕಲಿತಿದ್ದೇನೆ. ಇಲ್ಲಿಗೆ ಬಂದಿರುವ ಉದ್ದೇಶ ಕನ್ನಡ ಕಾನ್ಫರೆನ್ಸ್ ಗೆ. ನಿಮ್ಮ ಊರಿನಲ್ಲಿ ಕನ್ನಡ ಸಮ್ಮೇಳನ ನವೆಂಬರ್ ನಲ್ಲಿ ಭಾರಿ grand ಆಗಿ ಇಟ್ಟುಕೊಂಡಿದ್ದಾರೆ. ಅದನ್ನು ಅಟೆಂಡ್ ಮಾಡಿ ಸ್ವಲ್ಪ ಕನ್ನಡದ ಪುಸ್ತಕಗಳು, ಕಥೆಗಳು ಕಾದಂಬರಿಗಳು ಎಲ್ಲವನ್ನೂ ನಮ್ಮ ಊರಿಗೆ ತಗೊಂಡು ಹೋಗಬೇಕು ಅಂತ ಇದ್ದೀನಿ.

ಅಜ್ಜಿ : ಒಳ್ಳೆದಪ್ಪಾ ಮಗನೇ, ನಮ್ಮೂರಿನ ನವೆಂಬರ್ ತಿಂಗಳ ಕನ್ನಡ ವ್ಯಾಮೋಹ ನೀನು ಎಲ್ಲಾ ತಿಂಗಳಿಗೂ ಹರಡು. ದೇವರು ಒಳ್ಳೇದು ಮಾಡಲಿ.

ಮೊಮ್ಮಗ : ಕನ್ನಡ ಮಾತೆಗೆ ಜೈ !!!! ▪

Jaya Hosur
MARA : 0002497

Professionals Immigration Services Australia

All Kind Of Visa Services

- Skill Visa
- Business Visa
- Family Visa
- Student Visa
- Spouse Visa
- Protection Visa

1300 857 506

www.pisaus.com.au

Enquires at :

info@pisaus.com.au

Local Branch:
Suite 5,Level 4,91 George Street
Parramatta NSW 2124
Tel: +61(2) 9635 5566
Fax: +61(2) 9635 0044

Overseas Branch (India):
No77/2,DVG road,Basavanagudi
Bangalore,560004
Contact: Vijay +917022887660

ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಲನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝಗಝಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚೆಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

ಸಹಾಯ ಹೇಗೆ?

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com

ನವೆಂಬರ್ - ಇದು ಕನ್ನಡದ ತಿಂಗಳು. ಈ ತಿಂಗಳಲ್ಲಿ ನಾವು ಕನ್ನಡದ ಬಗ್ಗೆ ಅಭಿಮಾನದಿಂದ, ಉತ್ಸಾಹದಿಂದ ಅತಿ ಹೆಚ್ಚು ಮಾತನಾಡುವಂತೆಯೇ, ನಮ್ಮ ಹಿಂದಿನ ವೈಭವಗಳನ್ನು ನೆನೆಸಿಕೊಂಡಂತೆ, ನಮ್ಮ ಆತ್ಮಾವಲೋಕನ ಮಾಡಿಕೊಳ್ಳಲು ನಮ್ಮ ನಾಳೆಗಳನ್ನು ಕನಸಿಕೊಳ್ಳಲು ಸಕಾಲ.

ಕನ್ನಡಿಗರು ತಾವು ಹುಟ್ಟಿಬೆಳೆದ ನಾಡನ್ನು ಬಿಟ್ಟು ಬೇರೊಂದು ನಾಡಿಗೆ ನಾನಾ ಕಾರಣಗಳಿಗಾಗಿ ವಲಸೆ ಹೋಗಿದ್ದಾರೆ ಹೋಗುತ್ತಿದ್ದಾರೆ. ಹಾಗೆಯೇ ತಮ್ಮ ನಿತ್ಯದ ಜಂಜಾಟದ ಜೀವನದಲ್ಲಿ ರಗಳೆಗಳ ನಡುವೆಯೂ ತಮ್ಮ ಅಮೂಲ್ಯವಾದ ವೇಳೆಯನ್ನು ಕನ್ನಡಭಾಷೆ ಉಳಿಸಿ ಬೆಳೆಸಲು ವಿನಿಯೋಗಿಸುತ್ತಿದ್ದಾರೆ. ವಲಸಿಗರ ಜೀವನಾಧಾರದ ಮೂಲವು ಏನೇ ಇದ್ದರೂ ಭಾಷೆಗಾಗಿ ದುಡಿಯಲು ವಿನಿಯೋಗಿಸುವ ಸಮಯವು ನಿಸ್ವಾರ್ಥ ಸೇವೆ ಮಾತ್ರ. ಒಳನಾಡಿನಲ್ಲಿ ನೆಲೆಕಳೆದುಕೊಳ್ಳುತ್ತಿರುವ ಕನ್ನಡ ಇಂದು ಹೊರನಾಡಿನಲ್ಲಿ ಅರಳುತ್ತಿದ್ದರೆ ಅದಕ್ಕೆ ಕಾರಣ ಹೊರನಾಡ ಕನ್ನಡಿಗರು ತನು ಮನ ಧನ ಅರ್ಪಿಸಿ ಮಾಡುತ್ತಿರುವ ಸೇವೆ. ಹಾಗಾಗಿ ಇಂದು ಕನ್ನಡದ ಅಸ್ಮಿತೆ ಉಳಿಯಲು ಹೊರನಾಡಿಗರ ಶ್ರಮ ಸ್ಮರಣೀಯ, ನಮ್ಮ ಕಲೆ, ಸಂಸ್ಕೃತಿ, ಸಂಗೀತ ಇತ್ಯಾದಿ ವಿಭಾಗಗಳಲ್ಲಿ ಕನ್ನಡದ ಕಂಪು ವಿಶ್ವವ್ಯಾಪಿಯಾಗುವಂತೆ ಮಾಡಿದ ಶ್ರೇಯಸ್ಸು ಹೊರನಾಡ ಕನ್ನಡಿಗರಿಗೆ ಸಲ್ಲುತ್ತದೆ.

ಹೀಗಿರುವ ಹೊರನಾಡ ಕನ್ನಡ ಸಮಾಜದ ಮುಂದಿನ ದಿನಗಳನ್ನು ನೆನೆದರೆ ಬರುವ ಚಿತ್ರಣ ಸುಂದರವೇನೂ ಅಲ್ಲ. ಮೂರು ಸಾವಿರಕ್ಕೂ ಮಿಗಿಲಾದ ವರ್ಷಗಳ ಇತಿಹಾಸ ಹೊಂದಿರುವ ನಮ್ಮ ನುಡಿ ಬರೀ ಒಳನಾಡಿನಲ್ಲಷ್ಟೇ ಅಲ್ಲ ಹೊರನಾಡಿನಲ್ಲೂ ಉಳಿಕೆಗಾಗಿ ಪರದಾಡುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ಇದನ್ನು ತಿಳಿಯಲು ನಾವು ಹೆಚ್ಚು ಶ್ರಮಪಡುವ ಅಥವಾ ಸಂಶೋಧನೆ ಮಾಡುವ ಅಗತ್ಯವೇನೂ ಇಲ್ಲ. ಒಮ್ಮೆ ಇಲ್ಲಿನ ಮಕ್ಕಳ ಹಾಗೂ ಯುವಕರ ನಡುವೆ, ಬಹುತೇಕ ಕುಟುಂಬಗಳ ನಡುವೆ ಒಮ್ಮೆ ಸುಳಿದರೂ ಸಾಕು, ವಸ್ತುಸ್ಥಿತಿ ಕಣ್ಣಿಗೆ ರಾಚುತ್ತದೆ. ನಿಜ ವಿಷಯ ಬಯಲಾಗುತ್ತದೆ. ನಮ್ಮ ಅನೇಕ ಅಪ್ಪ ಅಮ್ಮಂದಿರ ಕನ್ನಡ ಅಭಿಮಾನ ಬರೀ ಹೊರಗೆ ಆಡಂಬರ ತೋರಲು ಸಂಗೀತ ನಾಟಕ ನೃತ್ಯ ಸಾಹಿತ್ಯಗಳಲ್ಲಿ ತಾವು ಮೆರೆಯಲು ಸೀಮಿತವಾಗುತ್ತದೆ. ಬಯಸೋ ಬಯಸದೆಯೋ ಮಕ್ಕಳಿಗೆ ಮಾತೃಭಾಷೆ ಕಲಿಸದ ದುಷ್ಪರಿಣಾಮ ಗೋಚರಿಸುವಷ್ಟರಲ್ಲಿ ಮಕ್ಕಳು ಹದಿಹರಯ ದಾಟಿರುತ್ತಾರೆ.

ಹಾಗೆಯೇ ಅನೇಕ ಅಪ್ಪ ಅಮ್ಮಂದಿರು ತಮ್ಮ ಮಕ್ಕಳಿಗೆ ಕನ್ನಡ ಕಲಿಸಬೇಕೆಂಬ ಸಹಜವಾದ ಹಂಬಲ ಇದ್ದರೂ ಸಹ ಸರಿಯಾದ ಮಾರ್ಗ ತಿಳಿಯದೆ ಪರದಾಡುತ್ತಿದ್ದಾರೆ. ಮಕ್ಕಳಿಗೆ ಕನ್ನಡ ಕಲಿಸಲು ಕೇವಲ ಬಯಕೆ ಮಾತ್ರ ಇದ್ದರೆ ಸಾಲದು. ಅದಕ್ಕೆ ಸರಿಯಾದ ಮಾರ್ಗೋಪಾಯ ಸಹಾ ಅಗತ್ಯವಾಗಿದೆ. ಇಲ್ಲದಿದ್ದರೆ ನಿಮ್ಮ ಪ್ರಯತ್ನ ನೀರಿನಲ್ಲಿ ಹೋಮ ಮಾಡಿದಂತೆಯೇ ಸರಿ. ನಿಮ್ಮ ಮಕ್ಕಳ ಕನ್ನಡ ಕಲಿಕೆಗೆ ನೆರವಾಗಲು ಕೆಲವು ಉಪಯುಕ್ತ ಸಲಹೆ ಇಲ್ಲಿದೆ.

ಇಂದು ನಾಳೆಯನ್ನದೆ ಕಲಿತವನೇ ಜಾಣ

೧. ಮಕ್ಕಳಿಸ್ಕೂಲು ಮನೇಲಲ್ಲ್ವೆ - ಇದು ಕನ್ನಡಕ್ಕೊಬ್ಬರಾದ ಕೈಲಾಸಂ ಅವರ ಬಹುಪ್ರಸಿದ್ಧ ಸಾಲು. ಅಷ್ಟೇ ಸತ್ಯ ಸಹ. ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣ ಕೊಡಬಲ್ಲವರು ಪೋಷಕರು ಮಾತ್ರ. ಯಾವುದೇ ಭಾಷೆ ಮೊದಲು ಮಕ್ಕಳು ಕಲಿಯುವುದು, ಕೇಳುವ ಮೂಲಕ. ಮಕ್ಕಳ ಮೊದಲ ಎರಡು ಮೂರು ವರ್ಷಗಳಲ್ಲಿ ಕೇಳಿದ್ದನ್ನು ನಂತರ ಪುನರ್ರಚಿಸಲು ಪ್ರಯತ್ನಿಸುತ್ತಾರೆ. ಹಾಗಾಗಿ ಮನೆಯ ಇತರರೆಲ್ಲರೂ ಕನ್ನಡದಲ್ಲಿ ವ್ಯವಹರಿಸುತ್ತಿದ್ದರೆ ಮಗುವು ಸಹಜವಾಗಿ ಕನ್ನಡ ಕಲಿಯಲು ಅನುವು ಮಾಡಿಕೊಟ್ಟಂತಾಗುವುದು. ತನ್ನ ಸಹಜವಾದ ಹಸಿವು, ನೋವು, ನಲಿವು ಮತ್ತು ಸಂಭ್ರಮಗಳನ್ನು ಹಂಚಿಕೊಳ್ಳಲು ಮಗು ಮನೆಯ ಎಲ್ಲರೂ ಮಾತಾಡುವ ಭಾಷೆಯನ್ನೇ ಬಳಸಲು ಬಯಸುತ್ತದೆ.

ಮುಂದಿನ ಪುಟ ನೋಡಿ ...

೨. ಮಗುವು ಮಾತು ಕಲಿಯಲು ಶುರುಮಾಡುತ್ತಿರುವಾಗ ಅನೇಕ ಅಪ್ಪಅಮ್ಮಂದಿರು, ಮುಂದೆ ಮಗುವಿಗೆ ಹೊರಹೋದಾಗ ಎಲ್ಲರೊಂದಿಗೆ ವ್ಯವಹರಿಸಲು ಕಷ್ಟವಾಗಬಾರದೆಂದು ಚಿಕ್ಕಂದಿನಿಂದಲೇ, ಮನೆಯಲ್ಲೇ ಇಂಗ್ಲಿಷ್ ಕಲಿಸಲು ತೊಡಗುತ್ತಾರೆ. ಹೊರನೋಟದಲ್ಲಿ ಇದರಲ್ಲಿ ಏನೂ ತೊಂದರೆ ಇಲ್ಲವೆಂದು ಕಂಡರೂ, ಒಳನೋಡಿದಾಗ ಇದರ ಗೋಜಲು ಅರಿವಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯವರು ನಡೆಸಿದ ಸಂಶೋಧನೆಯಂತೆ, ಇದು ಮಗುವಿನಲ್ಲಿ ದೊಡ್ಡ ತೊಳಲಾಟ ಉಂಟುಮಾಡಿ ಮುಂದೆ ಇತರರ ನಡುವೆ ವ್ಯವಹರಿಸಲು ಬಹುಕಷ್ಟಪಡುವಂತೆ ಮಾಡುತ್ತದೆ. ವಿಶೇಷವಾಗಿ ಮಗುವು ತನ್ನ ಮನೆಯವರ ಜೊತೆ ತನ್ನ ಭಾಷೆಯಲ್ಲೇ ವ್ಯವಹರಿಸಲು ಬಯಸುತ್ತದೆ. ಆದರೆ ಅದನ್ನು ಅವರಿಗೆ ತಿಳಿಸಲು ಅದಕ್ಕೆ ಬರುವುದಿಲ್ಲ. ಹಾಗಾಗಿ ಈ ಗೊಂದಲದಲ್ಲಿ ಮಗುವು ತಾನು ಹೆಚ್ಚು ಕೇಳುವ ಇಂಗ್ಲೀಷಿಗೇ ಆತುಬೀಳುತ್ತದೆ. ಅನೇಕ ಅಪ್ಪಅಮ್ಮಂದಿರು ತಿಳಿದಿರುವಂತೆ ಮನೆಯಲ್ಲಿ ಇಂಗ್ಲೀಷ್ ಬಳಸುವುದರಿಂದ ಅವರು ಮಕ್ಕಳಿಗೆ ಹೊರವ್ಯವಹಾರವನ್ನು ಸುಲಭಮಾಡುವುದರ ಬದಲಾಗಿ ಜಟಿಲಮಾಡುತ್ತಿದ್ದೇವೆ ಎಂಬ ಅರಿವಿರುವುದಿಲ್ಲ. ತುಂಬಾ ಮುಖ್ಯವಾಗಿ ಮಕ್ಕಳಿಗೆ ಇತರ ಭಾಷಿಕರೊಡನೆ ವ್ಯವಹರಿಸುವಾಗ ಭಾಷೆಯ ಚಾನೆಲ್ ಸ್ವಿಚ್ ಮಾಡುವ ಹಾಗೂ ಎರಡು ಮೂರು ಭಾಷೆಗಳನ್ನು ಒಟ್ಟೊಟ್ಟಿಗೇ ಕಲಿಯುವ ಸಾಮರ್ಥ್ಯ ಇರುವುದರಿಂದ ನಾವೇ ಮನೆಯಲ್ಲಿ ಇಂಗ್ಲೀಷು ಕಲಿಸುವ ಅಗತ್ಯವೇನೂ ಇರುವುದಿಲ್ಲ, ಬದಲಾಗಿ ಹೊರಗೆ ಇನ್ನೂ ಹೆಚ್ಚು ಆಳವಾಗಿ ಕಲಿಯುವ ಅವಕಾಶ ಇರುತ್ತದೆ.

೩. ಮಕ್ಕಳು ತಮ್ಮ ಮನೆಯವರೊಂದಿಗೆ ಮಾತ್ರವಲ್ಲದೆ ತಮ್ಮ ಇತರರೊಡನೆ ಕನ್ನಡದಲ್ಲಿ ವ್ಯವಹರಿಸುವುದು ತುಂಬಾ ಮುಖ್ಯ. ಇಲ್ಲದಿದ್ದರೆ ತಮ್ಮ ಭಾಷೆಯು ಬರೀ ತಮ್ಮ ಮನೆಗೆ ಮಾತ್ರ ಸೀಮಿತ ಎಂಬ ಕೀಳರಿಮೆ ಬೆಳೆಸಿಕೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ ನಿಮ್ಮ ಕನ್ನಡ ಗೆಳೆಯರ ಮಕ್ಕಳೊಂದಿಗೆ ನಿಮ್ಮ ಮಕ್ಕಳು ಕನ್ನಡದಲ್ಲಿ ಮಾತನಾಡಲು ಪ್ರೋತ್ಸಾಹಿಸಿ. ಅಗತ್ಯವಿದ್ದಲ್ಲಿ ನೀವೇ ಅವರ ನಡುವೆ ಆಟವಾಡುವ ಮೂಲಕ ಸಂವಹಿಸಲು ನೆರವಾಗಿ. ಇದರಿಂದ ಮಕ್ಕಳ ಭಾಷಾ ಕ್ರಿಯಾತ್ಮಕತೆ ಬಹಳ ಬೆಳೆಯುತ್ತದೆ.

೪. ಮಗುವು ಮನೆಯವರೊಂದಿಗೆ ಗೆಳೆಯರೊಂದಿಗೆ ಮಾತನಾಡುವುದಲ್ಲದೆ ಇತರ ಮಾಧ್ಯಮಗಳಲ್ಲಿ ಕನ್ನಡದಲ್ಲಿ ತೊಡಗುವುದು ಬಹಳ ಮುಖ್ಯ. ಅದರಲ್ಲೂ ಇಂದಿನ ಜಾಗತೀಕರಣ ಯುಗದಲ್ಲಿ ಅದು ಅತ್ಯವಶ್ಯ ಕೂಡಾ. ಇದಕ್ಕೆ ಟೀವಿ ಹಾಗೂ ಇಂಟರ್ನೆಟ್ ಬಹಳ ಸಹಾಯಕಾರಿ. ಮಕ್ಕಳಿಗೆ ಆಟೋಟ, ಕಾರ್ಟೂನ್ ಚಾನೆಲ್ ನೋಡುವಂತೆಯೇ, ಕನ್ನಡ ಕಾರ್ಯಕ್ರಮ, ಸಿನೇಮಾ ನಾಟಕ ನೋಡಲು ಪ್ರೋತ್ಸಾಹಿಸಿ. ಮನೆಯ ಇತರ ಎಲ್ಲರೂ ಕುಳಿತು ಒಟ್ಟಿಗೇ ನೋಡುವಂತಹ ಕಾರ್ಯಕ್ರಮ ನೋಡಿಸಿ. ಅದರ ಬಗ್ಗೆ ನಾಲ್ಕು ಮಾತನಾಡಿ, ಮಗುವು ಸಹಜವಾಗಿ ಇಂತಹ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿರುವಂತೆಯೇ ಸಂಬಂಧಿಸಿದ ಮುಂದಿನ ಕಾರ್ಯಕ್ರಮ ನೋಡಿಸಲು ಅನುವಾಗಿ. ಹೀಗೆಯೇ ಮಾಡುತ್ತಿದ್ದರೆ ಮಗುವು ತನ್ನಂತಾನೇ ಕನ್ನಡ ಕಾರ್ಯಕ್ರಮಗಳ ಬಗ್ಗೆ ರುಚಿ ಬೆಳೆಸಿಕೊಂಡು ಭಾಷೆ ಕಲಿಯಲು ನೆರವಾಗುತ್ತದೆ.

೫. ಮಗುವು ಸರಿಯಾಗಿ ಕನ್ನಡ ಅರ್ಥ ಮಾಡಿಕೊಳ್ಳಲು, ಸಂಕೋಚವಿಲ್ಲದೆ ಮಾತನಾಡಲು, ವ್ಯವಹರಿಸಲು ಶಕ್ತವಾದ ನಂತರ ಅಂದರೆ ಸರಿಸುಮಾರು ಒಂಭತ್ತು ಹತ್ತು ವರ್ಷದ ಹೊತ್ತಿಗೆ ಮಗುವಿಗೆ ಕನ್ನಡ ಓದಲು ಬರೆಯಲು ಕಲಿಸಲು ಸಕಾಲ. ನಿಮ್ಮ ಮನೆಗೆ ಅನುಕೂಲವಾದ ಜಾಗದಲ್ಲಿ ಕನ್ನಡ ಶಾಲೆ ಇದ್ದಲ್ಲಿ ಅಲ್ಲಿಗೆ ಮಗುವನ್ನು ಕಳಿಸಿ. ಇಲ್ಲದಿದ್ದಲ್ಲಿ ನೀವೇ ಓದು ಬರಹ ಕಲಿಸಲು ಮುಂದಾಗಿ. ತುಂಬಾ ಮುಖ್ಯವಾದ ಅಂಶವೆಂದರೆ ಓದು ಬರಹ ಕಲಿಸುವ ಮುಂಚೆ ಮಗುವಿಗೆ ಪೂರ್ತಿ ಮಾತನಾಡಲು ಬರದಿದ್ದರೆ ಓದುಬರಹ ಕಲಿಸುವುದು ವ್ಯರ್ಥವಾಗುತ್ತದೆ.

ಈ ಮೇಲಿನ ವಿಧಾನದಲ್ಲಿ ಕನ್ನಡ ಕಲಿಸುವುದು ಮೊದಮೊದಲು ಕಷ್ಟವಾಗಿ ಕಂಡರೂ, ಒಮ್ಮೆ ಪ್ರಯತ್ನಪಟ್ಟರೆ ಎಷ್ಟು ಸುಲಭ ಎಂದು ತಿಳಿಯುತ್ತದೆ. 'ಸುಲಿದ ಬಾಳೆಯ ಹಣ್ಣಿನಂದದಿ'ಇರುವ ನಮ್ಮ ಭಾಷೆ ಕಲಿಸಲೂ ಸಹಾ ಅಂತೆಯೇ ಸುಲಭಸಾಧ್ಯ. ಅಂತೆಯೇ ತುಂಬಾ ಮುಖ್ಯವಾದ ಅಂಶವೆಂದರೆ, ಕನ್ನಡದ ಬಗ್ಗೆ ಬರೀ ಒಣ ಅಭಿಮಾನ ಇದ್ದರೆ ಏನೂ ಪ್ರಯೋಜನವಿಲ್ಲ. ಸರಿಯಾದ ವ್ಯಾವಹಾರಿಕ ಪ್ರಯೋಜನ ಇದ್ದರೆ ಮಾತ್ರ ಅದು ಕೆಲಸಕ್ಕೆ ಬರುತ್ತದೆ. ▪

ಸಿಡ್ನಿ ಕನ್ನಡ ಶಾಲೆ (ನೊಂ)
Sydney Kannada School(Inc)

ಸಿಡ್ನಿಯಲ್ಲಿರುವ ಕನ್ನಡ ಶಾಲೆಯಲ್ಲಿ ಕಲಿಯಲು
ಈ ಇಮೇಲ್ ವಿಳಾಸಕ್ಕೆ ಪತ್ರ ಬರೆಯಿರಿ

sugamakannada@gmail.com

ವಿಜ್ಞಾನ

ಅರಿಶಿನದಿಂದ ಕುಂಕುಮ

ಸಂಕಲನ: ಬದರಿ ತ್ಯಾಮಗೊಂಡ್ಲು

ರಾಜ್ಯೋತ್ಸವದ ಈ ತಿಂಗಳಿನಲ್ಲಿ ಹಳದೀ ಕೆಂಪಿನ ಕನ್ನಡದ ಬಾವುಟವನ್ನು ನೆನೆಯದಿರುವವರು ಇರುವರೇ? ವಿಜ್ಞಾನದ ಈ ಅಂಕಣದಲ್ಲೂ ಕನ್ನಡದ ಬಣ್ಣಗಳ ನೆರಳಿನಲ್ಲೇ ಇರೋಣ. ಅಂದರೆ, ಅರಿಶಿನದಿಂದ ಕುಂಕುಮ ಮಾಡುವ ಬಗೆ ತಿಳಿಯೋಣ.

ಬೇಕಾಗುವ ಸಾಮಗ್ರಿ:

- ಅರಿಶಿನದ ಪುಡಿ
- ಎಲೆ-ಅಡಿಕೆಗೆ ಉಪಯೋಗಿಸುವ ಸುಣ್ಣ (Slaked lime)
- ಒಂದಷ್ಟು ನೀರು, ಕಲಸಲು ಒಂದು ಸಣ್ಣ ಪಾತ್ರೆ

ವಿಧಾನ:

- ಅರಿಷಶಿನಪುಡಿಯ ಮೇಲೆ ಸುಣ್ಣವನ್ನು ಹಾಕಿ ಸ್ವಲ್ಪ ನೀರಿನ್ನು ಚೆಮುಕಿಸಿ ಕಲಸಿ
- ಕಲಸುತ್ತ ಹೋದಂತೆ ಆ ಮಿಶ್ರಣವು ಕೆಂಪು ಬಣ್ಣಕ್ಕೆ ತಿರುಗುತ್ತದೆ

ಏನಾಗುತ್ತಿದೆ:

ಅರಿಶಿನದಲ್ಲಿರುವ ಕರ್ಕುಮಿನ್ ಎಂಬ ಒಂದು ಅಂಶದಿಂದ ಅದಕ್ಕೆ ಹಳದೀ ಬಣ್ಣವಿರುತ್ತದೆ. ಈ ಅಂಶವು ಅಸಿಡಿಕ್ (ಆಮ್ಲ) ಗುಣವುಳ್ಳದ್ದು. ಸುಣ್ಣದ ವೈಜ್ಞಾನಿಕ ಹೆಸರು ಕ್ಯಾಲ್ಸಿಯಂ ಹೈಡ್ರಾಕ್ಸೈಡ್ ಆಗಿದ್ದು, ಅದು ಆಲ್ಕಲಿ (ಕ್ಷಾರೀಯ) ಗುಣವುಳ್ಳದ್ದು. ಈ ಕರ್ಕುಮಿನ್ ವೈಶಿಷ್ಟ್ಯವೆಂದರೆ ಅಸಿಡಿಕ್ ಮಾಧ್ಯಮದಲ್ಲಿ ಯಾವುದೇ ಬಣ್ಣ ಬದಲಾವಣೆಯಾಗುವುದಿಲ್ಲ. ಹೀಗಾಗಿ ಅಸಿಡಿಕ್ ಆದ ಅರಿಶಿನದಲ್ಲಿ ತನ್ನ ಮೂಲಬಣ್ಣವಾದ ಹಳದಿಯಲ್ಲಿರುತ್ತದೆ. ಯಾವಾಗ ಆಲ್ಕಲಿ ಮಾಧ್ಯಮವಾದ ಸುಣ್ಣವನ್ನು ಬೆರೆಸುತ್ತೇವೋ, ಆಗ ಅದು ಕೆಂಪು ಬಣ್ಣಕ್ಕೆ ತಿರುಗುತ್ತದೆ. ಈ ಮಿಶ್ರಣವನ್ನು ಒಣಗಿಸಿದಾಗ ಕುಂಕುಮವು ದೊರೆಯುತ್ತದೆ. (ಕೆಂಪುಬಣ್ಣದ ವಿವಿಧ ಚಾಯೆಗಳನ್ನು ಪಡೆಯಲು ಮತ್ತಿತರ ರಾಸಾಯನಿಕೆಗಳನ್ನೂ ಬೆರೆಸಬಹುದೆಂಬ ತಿಳುವಳಿಕೆಯಿದೆ)

ಆರತಿ ಎತ್ತುವಾಗ ಒಕುಳಿಯೆಂದು ತಯಾರಿಸುತ್ತಾರೆ. ಅಲ್ಲೂ ಅರಿಶಿನವನ್ನು ಸುಣ್ಣದ ನೀರಿನಲ್ಲಿ ಹಾಕಿದಾಗ ಕೆಂಪಾಗುವುದನ್ನು ನೀವು ಕಾಣಬಹುದು. ▪

ಚಾಣ ಕರ್ನಾಟಕ – ಉತ್ತರ

೧. ನಿರ್ದೇಶಕರು ಪುಟ್ಟಣ್ಣ ಕಣಗಾಲ್, ಚಿತ್ರ ಮಸಣದ ಹೂವು.

೨. ಇವರ ಮತ್ತೊಂದು ಹೆಸರು ರವಿ, ಇವರ ಪತ್ನಿ, ನಟಿ ಬಿ ವಿ ರಾಧ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಆಸ್ಟ್ರೇಲಿಯಾ ಸಂಸತ್ತಿನಲ್ಲಿ ದೀಪಾವಳಿ

ನವೆಂಬರ್ 23 2015 – 6-8:30 PM

ಹೆಚ್ಚಿನ ಮಾಹಿತಿಗಾಗಿ

Email: info@deepavali.com

ಹೆರಿಟೇಜ್ ಇಂಡಿಯ

ಡಿಸೆಂಬರ್ 5th 2015 ಸಂಜೆ 5:30 ಕ್ಕೆ

ಬೌಮ್ಯಾನ್ ಹಾಲ್, ಬ್ಲ್ಯಾಕ್ಟೌನ್

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಭುಪಿಂದರ್ 0425 357 262

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.